ವಿಜಯಪುರ | ಸಂಪುಟ 04 | ಸಂಚಿಕೆ 089ಶ | ಪುಟ 04 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

**Udayarashmi** Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com | RNI NO: KARKAN/2023/86203 | ಮಂಗಳವಾರ, ಮೇ, 26, 2026



"ಕರ್ನಾಟಕದಲ್ಲಿರುವ ಅನಾಥ ಮಕ್ಕಳು ಬಾಲಮಂದಿರದಲ್ಲಿ ಹಾಗೂ ವಿವಿಧ ಮಠಮಾನ್ಯಗಳು, ಸ್ವಯಂಸೇವಾ ಸಂಸ್ಥೆಗಳಲ್ಲಿ ಆಶ್ರಯ ಪಡೆದಿದ್ದಾರೆ. ಈ ಎಲ್ಲ ಮಕ್ಕಳಿಗೆ ಮುಖ್ಯಮಂತ್ರಿಗಳು ಶಿಕ್ಷಣ ಮತ್ತು ಉದ್ಯೋಗದಲ್ಲಿ ವಿಶೇಷ ಮೀಸಲಾತಿ ಕಲ್ಪಿಸಬೇಕು."
ಸಂಗಮೇಶ ಬಬಲೇಶ್ವರ
ನಿಕಟಪೂರ್ವ ಅಧ್ಯಕ್ಷರು ಕರ್ನಾಟಕ ಬಾಲವಿಕಾಸ ಅಕಾಡೆಮಿ

■ ಸಂಗಮೇಶ ಬಬಲೇಶ್ವರ
ನಿಕಟಪೂರ್ವ ಅಧ್ಯಕ್ಷರು ಕರ್ನಾಟಕ ಬಾಲವಿಕಾಸ ಅಕಾಡೆಮಿ

# ಭಟ್ಕಳ್ ದುರ್ಘಟನೆಯಲ್ಲಿ ಅನಾಥರಾದ ಮಕ್ಕಳಿಗೆ ವಿಶೇಷ ನೆರವು ಕಲ್ಪಿಸಿ

■ ಉದಯರಶ್ಮಿ ದಿನಪತ್ರಿಕೆ



**ಕರ್ನಾಟಕ ಬಾಲವಿಕಾಸ ಅಕಾಡೆಮಿ ನಿಕಟಪೂರ್ವ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಆಗ್ರಹಿಸಿ ಮುಖ್ಯಮಂತ್ರಿಗೆ ಪತ್ರ**

ವಿಜಯಪುರ: ಭಟ್ಕಳ ತಾಲೂಕಿನ ಪಳ್ಳಿಹೊಳೆಯಲ್ಲಿ ಏಕಾಏಕಿ ನೀರಿನ ಮಟ್ಟ ಹೆಚ್ಚಾಗಿ ಹತ್ತು ಜನ ಸಾವಿಗೀಡಾಗಿದ್ದು ಅತ್ಯಂತ ನೋವಿನ ಸಂಗತಿಯಾಗಿದೆ. ಈ ದುರ್ಘಟನೆಯಿಂದಾಗಿ 24 ಮಕ್ಕಳ ಬದುಕು ಅತಂತ್ರವಾಗಿದೆ. ಈ ಮಕ್ಕಳು ಅನಾಥ-ರಾಗಿದ್ದು, ತಕ್ಷಣ ಅವರ ಶಿಕ್ಷಣ ಮುಗಿಯುವವರೆಗೆ ವಸತಿಯುತ ಉಚಿತ ಶಿಕ್ಷಣ ನೀಡುವುದರ ಜೊತೆಗೆ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಜಿಲ್ಲಾಡಳಿತಕ್ಕೆ ಮುಖ್ಯಮಂತ್ರಿಗಳು ನಿರ್ದೇಶನ ನೀಡಬೇಕು ಎಂದು ಕರ್ನಾಟಕ ಬಾಲವಿಕಾಸ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಆಗ್ರಹಿಸಿದ್ದಾರೆ.

ಈ ಕುರಿತು ಸೋಮವಾರ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ ಅವರು, ಈ ಕುಟುಂಬಗಳಿಗೆ ತುರ್ತು ಪರಿಹಾರ ಘೋಷಿಸಿರುವ ಮುಖ್ಯಮಂತ್ರಿಗಳ ಕಳಕಳಿಗೆ ನಾನು ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಕರ್ನಾಟಕದಲ್ಲಿರುವ ಅನಾಥ ಮಕ್ಕಳು ಸರಕಾರ ನಡೆಸುವ ಬಾಲಮಂದಿರದಲ್ಲಿ ಹಾಗೂ ವಿವಿಧ ಮಠಮಾನ್ಯಗಳು ಹಾಗೂ ಸ್ವಯಂಸೇವಾ ಸಂಸ್ಥೆಗಳಲ್ಲಿ ಆಶ್ರಯ ಪಡೆದಿದ್ದಾರೆ. ಈ ನಾಡಿನ ಎಲ್ಲಾ ಅನಾಥ ಮಕ್ಕಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ವಿಶೇಷ ಮೀಸಲಾತಿ ಕಲ್ಪಿಸುವುದರ ಮೂಲಕ ಅವರ ಬಾಳಿಗೆ ಮಾನ್ಯ ಮುಖ್ಯಮಂತ್ರಿಗಳು ಬೆಳಕಾಗಬೇಕೆಂದು ಸಂಗಮೇಶ ಬಬಲೇಶ್ವರ ಆಗ್ರಹಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿರುವ ಅವರು "ಮುಖ್ಯಮಂತ್ರಿಗಳು ಹಲವಾರು ಭಾಗ್ಯಗಳನ್ನು ನೀಡುವುದರ ಮೂಲಕ ರಾಜ್ಯದ ಭಾಗ್ಯವಿಧತರಾಗಿರುವ ಅವರು. ಈ ನಾಡಿನ ಎಲ್ಲಾ ಅನಾಥ ಮಕ್ಕಳ ಬಾಳಿಗೆ, ತಂದೆ ತಾಯಿಯ ಸ್ಥಾನದಲ್ಲಿ ನಿಂತು ಆ ಪ್ರೀತಿಯನ್ನು ನೀಡಿದ ತಾಯಿ ಹೃದಯದ ಮುಖ್ಯಮಂತ್ರಿಯಾಗಿ ಅನಾಥ ಮಕ್ಕಳ ಪಾಲಿನ ಭಾಗ್ಯವಿದಾತರಾಗಬೇಕೆಂದು ಸಂಗಮೇಶ್ ಬಬಲೇಶ್ವರ ಕಳಕಳಿಯಿಂದ ವಿನಂತಿಸಿಕೊಂಡಿದ್ದಾರೆ.

ರಾಜ್ಯದ ಹಿರಿಯ ಅಧಿಕಾರಿಗಳ ತಂಡವನ್ನು ಪಕ್ಕದ ಮಹಾರಾಷ್ಟ್ರಕ್ಕೆ ಕಳಿಸಿ, ಮಹಾರಾಷ್ಟ್ರ ಸರಕಾರ ಅನಾಥ ಮಕ್ಕಳಿಗಾಗಿ ವಿಶೇಷ ಮೀಸಲಾತಿ ಕಲ್ಪಿಸಿರುವ ಕುರಿತಾದ ಸಮಗ್ರ ವರದಿಯನ್ನು ತರಿಸಿ, ಅದರಲ್ಲಿರುವ ಅಂಶಗಳನ್ನು ಅಳವಡಿಸಿಕೊಳ್ಳುವುದರ ಜೊತೆಗೆ, ನಮ್ಮ ರಾಜ್ಯದಲ್ಲಿ ಅನಾಥ ಮಕ್ಕಳಿಗಾಗಿ ವಿಶೇಷ ಸವಲತ್ತುಗಳಿರುವ ವಿಶೇಷ ಮೀಸಲಾತಿಯನ್ನು ಕಲ್ಪಿಸಬೇಕೆಂದು ಬಬಲೇಶ್ವರ ಸರಕಾರವನ್ನು ಒತ್ತಾಯಿಸಿದ್ದಾರೆ.

# ಮೇಕೆದಾಟು ಯೋಜನೆ ನಿಲ್ಲಿಸುವ ಹಕ್ಕು ತಮಿಳುನಾಡಿಗಿಲ್ಲ

## ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಹೇಳಿಕೆಗೆ ನೆರೆ ರಾಜ್ಯದ ರಾಜಕೀಯ ಪಕ್ಷಗಳಿಂದ ತೀವ್ರ ವಿರೋಧ

ಬೆಂಗಳೂರು: ಮೇಕೆದಾಟು ಯೋಜನೆಯನ್ನು ನಿಲ್ಲಿಸುವ ಹಕ್ಕು ತಮಿಳು ನಾಡು ಸರ್ಕಾರಕ್ಕೆ ಇಲ್ಲ, ತಮಿಳು ನಾಡಿಗೆ ಯಾವುದೇ ಹಕ್ಕಿಲ್ಲ, ತಮಿಳು ನಾಡು ಕಾವೇರಿ ಜಲ ಸಮಿತಿ(ಅಥಅ) ಮುಂದೆ ದೂರು ನೀಡಿದರೆ, ಸಿಡಬ್ಲ್ಯುಸಿಯವರು ಕರ್ನಾಟಕ ಸರ್ಕಾರ ಪರವಾಗಿ ಅರ್ಜಿ ವಜಾ ಮಾಡಲಿದ್ದಾರೆ ಎಂದು ಡಿಸಿಎಂ ಡಿ ಕೆ ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಬೆಂಗಳೂರಿನಲ್ಲಿ ಮಾತನಾಡಿದ ಅವರು, ಮೇಕೆದಾಟು ಯೋಜನೆ ಬಗ್ಗೆ ನಾವು ಡಿಪಿಆರ್ ಸಿದ್ಧ ಮಾಡಿದ್ದೇವೆ. ಮೇಕೆದಾಟು ಕಚೇರಿ ತೆರೆದಿದ್ದೇವೆ, ಜಮೀನು ಗುರುತಿಸಿದ್ದೇವೆ. ಹೊಸ ಡಿಪಿಆರ್ ನೀಡುತ್ತಿದ್ದೇವೆ. ಕೇಂದ್ರ ಸರ್ಕಾರ ಅನುಮತಿ ನೀಡಿದ ಮೇಲೆ ಭೂಮಿಪೂಜೆ ನೆರವೇರಿಸುತ್ತೇವೆ ಎಂದರು.

### ತಮಿಳುನಾಡಿನಲ್ಲಿ ಯೋಜನೆಗೆ ಭಾರೀ ವಿರೋಧ

ಮೇಕೆದಾಟು ಅಣೆಕಟ್ಟು ವಿವಾದವು ಮತ್ತೆ ಕರ್ನಾಟಕ ಮತ್ತು ತಮಿಳುನಾಡು ನಡುವಿನ ರಾಜಕೀಯ ಕಿಚ್ಚನ್ನು ಹೊತ್ತಿಸಿದೆ. ಈ ಬಾರಿ ಇದು ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ಅವರ ಹೊಸ ಸರ್ಕಾರಕ್ಕೆ ಮೊದಲ ದೊಡ್ಡ ರಾಜಕೀಯ ಸವಾಲಾಗಿ ಪರಿಣಮಿಸಿದೆ.



ಕರ್ನಾಟಕ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಮೇಕೆದಾಟು ಯೋಜನೆಗೆ ಸಂಬಂಧಿಸಿದ ಪರಿಷ್ಕೃತ ವಿವರವಾದ ಯೋಜನಾ ವರದಿ (ಆಕಖ)ಯನ್ನು ಶೀಘ್ರದಲ್ಲೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ, ಯೋಜನೆಯನ್ನು ಮುಂದುವರಿಸಲಾಗುವುದು ಎಂದು ಹೇಳಿದ ಬಳಿಕ ಈ ವಿವಾದ ಮತ್ತೆ ತೀವ್ರಗೊಂಡಿತು. ಈ ಯೋಜನೆಯನ್ನು ವಿರೋಧಿಸಲು ತಮಿಳುನಾಡಿಗೆ ಯಾವುದೇ ಹಕ್ಕಿಲ್ಲ ಎಂಬ ಹೇಳಿಕೆಯನ್ನು ಕೂಡ ಶಿವಕುಮಾರ್ ನೀಡಿದ್ದಾಗಿ ವರದಿಯಾಗಿದೆ.

ಈ ಹೇಳಿಕೆಗಳು ತಮಿಳುನಾಡಿನಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.



"ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ಡಿಪಿಆರ್ ಸಿದ್ಧಪಡಿಸಲಾಗಿದೆ. ಯೋಜನೆಗಾಗಿ ಪ್ರತ್ಯೇಕ ಕಚೇರಿಯನ್ನೂ ಆರಂಭಿಸಲಾಗಿದೆ. ಮುಳುಗಡೆಯಾಗುವ ಅರಣ್ಯ ಪ್ರದೇಶಕ್ಕೆ ಪರಿಹಾರ ನೀಡಲು ಭೂಮಿಯನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಶೀಘ್ರದಲ್ಲೇ ಡಿಪಿಆರ್ ಅನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು."

■ ಡಿ.ಕೆ.ಶಿವಕುಮಾರ್
ಉಪ ಮುಖ್ಯಮಂತ್ರಿ



# ಬಕ್ರೀದ್ ಹಿನ್ನೆಲೆ ಕಟ್ಟೆಚ್ಚರಕ್ಕೆ ಎಎಸ್ಪಿ ರಾಮನಗೌಡ ಸೂಚನೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಚೆಕ್ ಪೋಸ್ಟ್‌ಗಳಲ್ಲಿ ಅನಧಿಕೃತವಾಗಿ ಜಾನುವಾರುಗಳ ಸಾಗಣೆಯಾಗದಂತೆ ಅಧಿಕಾರಿಗಳು ತೀವ್ರ ನಿಗಾ ವಹಿಸಬೇಕು ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮಗೌಡ ಹಟ್ಟಿ ಹೇಳಿದರು. ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಸಹಯೋಗದಲ್ಲಿ ಸೋಮವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ದಾಖಲೆಗಳಿಲ್ಲದೆ ಜಾನುವಾರುಗಳ ಸಾಗಣೆ ಮಾಡುವುದು ಕಾನೂನಿನ ವಿರುದ್ಧವಾಗಿದೆ. ಹಾಗಾಗಿ ಅಕ್ರಮವಾಗಿ ಜಾನುವಾರುಗಳ ಸಾಗಣೆಯಾಗದಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು. ಜಾನುವಾರು ಖರೀದಿ ಹಾಗೂ ಮಾರಾಟ ಮಾಡುವ ವೇಳೆ ಜಾನುವಾರುಗಳಿಗೆ ಕಿವಿಯೋಲೆ ಇರುವುದು ಕಡ್ಡಾಯ. ಸಾಗಾಣಿಕೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಅಧಿಕಾರಿಗಳಿಂದ ಧೃಡೀಕರಣ ಪತ್ರ ಕಡ್ಡಾಯವಾಗಿದೆ. ಎಲ್ಲ ಜಾನುವಾರುಗಳ ಮಾಲೀಕರಿಗೆ ಮನವೊಲಿಸಿ ಕಿವಿಯೋಲೆ ಹಾಕುವ ಪ್ರಕ್ರಿಯೆ ಜಾರಿಯಲ್ಲಿದೆ ಎಂದರು. ಬಕ್ರೀದ್ ಹಬ್ಬದ ಮುನ್ನಾ ದಿನವಾದ ಮೇ 27 ಹಾಗೂ ಮೇ 28ರಂದು ಜಾನುವಾರುಗಳ ಅಕ್ರಮ ವಧೆ ಹಾಗೂ ಸಾಗಣೆ ತಡೆಗಟ್ಟಲು ನಗರಪಾಲಿಕೆ, ಪಶುಪಾಲನಾ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳ ತಂಡ ರಚಿಸಿ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಕೈಕೊಳ್ಳಬೇಕು. ಈ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ಆಯುಕ್ತರು ತಂಡಗಳನ್ನು ರಚಿಸಿ ಅದರ ಮೇಲುಸ್ತುವಾರಿ ವಹಿಸಿಕೊಳ್ಳಬೇಕು ಎಂದು ಅವರು ಸಭೆಗೆ ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಮಾತನಾಡಿ,ಜಿಲ್ಲೆಯತಾಲೂಕಾವ್ಯಾಪ್ತಿಯಲ್ಲಿರುವ ತಹಶೀಲ್ದಾರ್ ನೇತೃತ್ವದಲ್ಲಿ ನಗರ, ಪುರಸಭೆ, ಪಟ್ಟಣಪಂಚಾಯತ ವ್ಯಾಪ್ತಿಯಲ್ಲಿ ಸಂಬಂಧಪಟ್ಟ ಆಯುಕ್ತರು ಹಾಗೂ ಮುಖ್ಯ ಅಧಿಕಾರಿಗಳ ನೇತೃತ್ವದಲ್ಲಿ, ಪಶು ಸಂಗೋಪನಾ ಇಲಾಖೆ ಮತ್ತು ಪೋಲಿಸ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ಒಳಗೊಂಡಂತೆ ತಂಡಗಳನ್ನು ರಚಿಸಿ ಕಾರ್ಯಾಚರಣೆ ನಡೆಸಬೇಕು. ತಿಡಗುಂದಿ ಟೋಲ್ ಗೇಟ್, ಧೂಳಖೇಡ, ಸೊಲಾಪುರ ನಾಕಾ, ಹಾಗೂ ಜಮಖಂಡಿ ನಾಕಾಗಳಲ್ಲಿ ಹೆಚ್ಚುವರಿ ತಂಡಗಳನ್ನು ರಚಿಸಬೇಕು ಸೂಚಿಸಿದರು. ಒಂದು ವೇಳೆ ವಶಪಡಿಸಿಕೊಂಡ ಗೋವುಗಳನ್ನು ತಕ್ಷಣ ಹತ್ತಿರದ ಗೋಶಾಲೆಗಳಿಗೆ ಹಸ್ತಾಂತರಿಲು ಕ್ರಮ ವಹಿಸಬೇಕು. ಪಶು ಸಂಗೋಪನಾ ಇಲಾಖೆಯಲ್ಲಿ ವಾಹನಗಳ ಕೊರತೆ ಇದ್ದು ಈ ಸಂದರ್ಭದಲ್ಲಿ ಪ್ರತಿ ತಂಡಕ್ಕೆ ಒಂದರಂತೆ ವಾಹನಗಳನ್ನು ಒದಗಿಸಲು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು. ಅನಧಿಕೃತವಾಗಿ ಜಾನುವಾರು ಸಾಗಣೆ ಮಾಡುವ ವಾಹನಗಳ ನೋಂದಣಿ ರದ್ದುಪಡಿಸಬೇಕು. ಕರ್ನಾಟಕ ಜಾನುವಾರು ಹತ್ಯೆ ಪ್ರಬಂಧಕ ಮತ್ತು ಸಂರಕ್ಷಣಾ ಕಾಯ್ದೆಯನ್ವಯ ಯಾವುದೇ ರೀತಿಯ ಜಾನುವಾರುಗಳು ಎಲ್ಲ ವಯಸ್ಸಿನ ಆಕಳು, ಆಕಳು ಕರು, ಹೋರಿ, ಎತ್ತು ಅಲ್ಲದೆ 13 ವರ್ಷದೊಳಗಿನ ಎಮ್ಮೆ ಕೋಣಗಳನ್ನು ಹತ್ಯೆ ಮಾಡುವಂತಿಲ್ಲ. ಉಚ್ಚ ನ್ಯಾಯ್ಯಾಲಯದ ಆದೇಶದನ್ವಯ ಒಂಟಿಗಳನ್ನು ಕೂಡ ಬಕ್ರೀದ ಸಂದರ್ಭದಲ್ಲಿ ಹತ್ಯೆ ಮಾಡುವಂತಿಲ್ಲ. ಬಕ್ರೀದ್ ಹಿನ್ನೆಲೆಯಲ್ಲಿ ಜಾನುವಾರುಗಳ ಅಕ್ರಮ ಸಾಗಣೆ ಹಾಗೂ ವಧೆಗಳ ಬಗ್ಗೆ ಸಾರ್ವಜನಿಕರು ಜಿಲ್ಲಾಡಳಿತಕ್ಕೆ ಇಲ್ಲವೇ ಹತ್ತಿರ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಬೇಕು ಎಂದರು. ಬಕ್ರೀದ ಸಂದರ್ಭದಲ್ಲಿ ಯಾವುದೇ ರೀತಿಯ ಕಾಯ್ದೆ ಉಲ್ಲಂಘನೆಯಾಗದಂತೆ ಯಾವುದೇ ಸಮಸ್ಯಗಳಾಗದಂತೆ ಕರ್ತವ್ಯ ನಿರ್ವಹಿಸುವಂತೆ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ಪ್ರಾಣಿ ಕಲ್ಯಾಣ ಮಂಡಳಿಯು ಭಾರತದ ಪ್ರಾಣಿ ಕಲ್ಯಾಣ ಮತ್ತು ಸಂರಕ್ಷಣಾ ಕಾನೂನು, ಪ್ರಾಣಿಗಳ ಜನನ ನಿಯಂತ್ರಣ ನಿಯಮ -2023 ಹಾಗೂ ಭಾರತದಲ್ಲಿ ನೀವು ತಿಳಿದಿರಲೇಬೇಕಾದಂಥಹ ಪ್ರಾಣಿಗಳ ಕಾನೂನು ಕುರಿತು ಕರ ಪತ್ರಗಳನ್ನು ಬಿಡುಗಡೆಗೊಳಿಸಲಾಯಿತು. ಸಭೆಯಲ್ಲಿ ಪ್ರಭಾರಿ ಉಪ ನಿರ್ದೇಶಕರಾದ ಡಾ. ಪ್ರಲ್ಹಾದ ಪಾಟೀಲ, ಮುಖ್ಯ ಪಶು ವೈದ್ಯಾಧಿಕಾರಿಗಳಾದ ಡಾ. ಸುಜಾತಾ, ಡಾ. ಶಿವಾನಂದ ಮೇಟಿ, ಡಾ. ಯು.ಜೆ. ನಾಲಾ, ಡಾ. ಬಿ.ಎಸ್ ಕನಮಡಿ, ಡಾ. ವೆಂಕಟೇಶ ವಾಲಿಕಾರ, ಡಾ. ಶರಣಗೌಡ ಬಿರಾದಾರ,ಡಾ. ಧರಮಪ್ಪ ರಾಠೋಡ, ಡಾ. ತಜಪಶೆಟ್ಟಿ, ಡಾ. ರಾಮು ರಾಠೋಡ, ಡಾ. ಹಿರೇಮಠ, ಡಾ. ಪ್ರವೀಣ ಸುರಪುರ, ಪರಿಸರ ಮಾಲಿನ್ಯ ನಿಯಂತ್ರಣಾಧಿಕಾರಿ, ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

**ತಿಕೋಟಾದಲ್ಲಿ ನಡೆದ ಯುವ ಶಕ್ತಿ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಭರವಸೆ**

# ದೇಶದ ಬೆನ್ನೆಲುಬಾಗಿರುವ ಯುವಕರಿಗೆ ಸದಾ ನಮ್ಮ ಬೆಂಬಲ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ದೇಶದ ಬೆನ್ನೆಲುಬಾಗಿರುವ ಯುವಕರಿಗೆ ನಾವು ಸದಾ ಬೆಂಬಲವಾಗಿ ನಿಂತಿದ್ದೇವೆ ಎಂದು ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಹೇಳಿದ್ದಾರೆ.

ರವಿವಾರ ಮುಸ್ಸಂಜೆ ತಿಕೋಟಾ ಪಟ್ಟಣದಲ್ಲಿ ನಡೆದ ಯುವ ಶಕ್ತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.


ಇಂದಿನ ಕಾರ್ಯಕ್ರಮ ಯುವಕರ ಶಕ್ತಿ ಪ್ರದರ್ಶನ ಮಾತ್ರವಲ್ಲ, ಯುವಕರ ಬೃಹತ್ ಜಾತ್ರೆಯಾಗಿದೆ. ತಮ್ಮೆಲ್ಲರ ಪ್ರೀತಿ, ವಿಶ್ವಾಸ, ಅಭಿಮಾನ ಕಂಡು ಮಂತ್ರಮುಗ್ಧನಾಗಿದ್ದೇನೆ. ತಾವು ನಮ್ಮ ಮೇಲೆ ಇಟ್ಟಿರುವ ಪ್ರೀತಿಗೆ ಋಣಿಯಾಗಿದ್ದೇನೆ. ಈ ಕಾರ್ಯಕ್ರಮ ವಿರೋಧಿಗಳಿಗೆ ನಿದ್ದೆ ಗೆಡಿಸಲಿದೆ. ತಮ್ಮೆಲ್ಲರ ಒಳಿತಿಗಾಗಿ ನಾವು ಸದಾ ಶ್ರಮಿಸುತ್ತೇನೆ ಎಂದು ಅವರು ಹೇಳಿದರು.

ಭಾರತದ ಜನಸಂಖ್ಯೆಯಲ್ಲಿ ಶೇ.65ರಷ್ಟು ಯುವಕರಿದ್ದಾರೆ. ಹೀಗಾಗಿ ಹಿರಿಯರ ಮಾರ್ಗದರ್ಶನದಲ್ಲಿ ಯುವಕರನ್ನು ಬೆಳೆಸುವ ಕೆಲಸವನ್ನು ಮಾಡುತ್ತಿದ್ದೇವೆ. ಸಚಿವ ಎಂ. ಬಿ. ಪಾಟೀಲ ಅವರು ಮಾಡಿರುವ ನೀರಾವರಿ ಯೋಜನೆಗಳು ಯುವಜನತೆ ಕೃಷಿ, ತೋಟಗಾರಿಕೆ ಸೇರಿದಂತೆ ಸ್ವಯಂ ಉದ್ಯೋಗ ಕೈಗೊಂಡು ಸ್ವಾವಲಂಬಿಯಾಗಿ ಬದುಕುಸಾಗಿಸಲುನೆರವಾಗಿವೆ.ಲಭ್ಯವಿರುವ ತಂತ್ರಜ್ಞಾನವನ್ನು ಬಳಸಿಕೊಂಡು ಯುವಕರು ಕೃಷಿಯಲ್ಲಿ ಹೆಚ್ಚೆಚ್ಚು ಆದಾಯ ಕಂಡುಕೊಳ್ಳಬಹುದಾಗಿದೆ. ಹೊಸ ಹೊಸ ಯೋಚನೆಗಳನ್ನು ಹೊಂದಿರುವ ಯುವಕರು ರಾಜಕೀಯಕ್ಕೆ ಬರಬೇಕು. ಹಿರಿಯರ ಮಾರ್ಗದರ್ಶನದಲ್ಲಿ ಸಮಾಜದ ಅಭ್ಯುದಯಕ್ಕಾಗಿ ಶ್ರಮಿಸಬೇಕು. ಅಲ್ಲದೇ, ಯುವಕರು ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡು ರಾಜಕೀಯದಲ್ಲಿಯೂ ಉಜ್ವಲ ಭವಿಷ್ಯವನ್ನು ಕಂಡುಕೊಳ್ಳಬೇಕು. ನಿರ್ಭಿತಿಯಿಂದ ಕೆಲಸ ಮಾಡಬೇಕು. ಮುಂಬರುವ ಸ್ಥಳೀಯ ಚುನಾವಣೆಗಳಾದ ಗ್ರಾಮ ಪಂಚಾಯಿತಿ, ತಾಲೂಕು ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಯಲ್ಲಿ ಪಕ್ಷದ ಗೆಲುವಿಗಾಗಿ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು. ಸಚಿವ ಎಂ. ಬಿ. ಪಾಟೀಲ ಮತ್ತು ನಾನು ಸದಾ ತಮ್ಮೊಂದಿಗೆ ಇರುತ್ತೇವೆ ಎಂದು ಸುನೀಲಗೌಡ ಪಾಟೀಲ ಯುವಕರಿಗೆ ಅಭಯ ನೀಡಿದರು.

ತೊರವಿ ಶ್ರೀ ಸಿದ್ದಲಿಂಗೇಶ್ವರ ಸ್ವಾಮೀಜಿ ಮಾತನಾಡಿ, ಯುವಕರ ಇಂದಿನ ಉತ್ಸಾಹ ಹಂಡೆ ಹಾಲು ಕುಡಿದಷ್ಟು ಸಂತೋಷವಾಗಿದೆ. ಇದು ಎಂ. ಬಿ. ಪಾಟೀಲ ಮತ್ತು ಸುನೀಲಗೌಡ ಪಾಟೀಲ ಅವರ ಮೇಲೆ ಯುವಕರಿಗೆ ಇರುವ ಪ್ರೀತಿಗೆ ಸಾಕ್ಷಿಯಾಗಿದೆ. ತಮ್ಮನ್ನು ಹೃದಯದಲ್ಲಿ ಇಟ್ಟುಕೊಂಡಿರುವ ಯುವಕರಿಗೆ ಸುನೀಲಗೌಡರು ಬೆನ್ನೆಲುಬಾಗಿ ನಿಂತಿದ್ದಾರೆ. ಸಂತರ ಬಗ್ಗೆ ಅಪಾರ ಗೌರವ ಹೊಂದಿರುವ ಅವರು ಜನಪರ ಕಾಳಜಿಯುಳ್ಳ ನಾಯಕರಾಗಿದ್ದಾರೆ. ಸಚಿವ ಎಂ. ಬಿ. ಪಾಟೀಲರು ರೈತರಿಗಾಗಿ ಮಾಡಿರುವ ಕೆಲಸ ಕಾರ್ಯಗಳು ಇಡೀ ರಾಜ್ಯಾದ್ಯಂತ ಮನೆಮಾತಾಗಿವೆ. ಇಂಥ ಸಹೋದರರು ಜಿಲ್ಲೆಯಲ್ಲಿದ್ದರೆ ಜನರಿಗೆ ಯಾವುದೇ ಕೊರತೆ ಇರುವುದಿಲ್ಲ. ಇಬ್ಬರೂ ಸಹೋದರರು ಇನ್ನೂ ಉತ್ತರೋತ್ತರವಾಗಿ ಬೆಳೆಯಲಿ ಎಂದು ಆಶೀರ್ವದಿಸಿದರು.

ಈ ಸಂದರ್ಭದಲ್ಲಿ ತಿಕೋಟಾ ಶಿವಬಸವ ಶಿವಾಚಾರ್ಯರು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಿದ್ದು ಗೌಡನವರ, ಈರನಗೌಡ ಬಿರಾದಾರ, ಮುಖಂಡರಾದ ರಾಮು ದೇಸಾಯಿ, ಬಸಯ್ಯ ವಿಭೂತಿ, ಲೇಪು ಕೊಣ್ಣೂರ, ಭಾಗೀರಥಿ ತೇಲಿ, ಶೋಭಾ ಹಲ್ಯಾಳ, ಪ್ರಶಾಂತ ಪಾಟೀಲ ಕನಮಡಿ, ಕಿರಣ ದಳವಾಯಿ(ದೇಸಾಯಿ), ವಿ. ಎಂ. ಪಾಟೀಲ, ರಾಮರಾವ ದೇಸಾಯಿ, ಬಾಬು ಹಂಚಿನಾಳ, ಪ್ರಕಾಶ ಜಲಗೇರಿ, ಸುರೇಶ ಕೊಣ್ಣೂರ, ಅರುಣ ಖೈರಾವ, ಸಚಿನ ಪಾಟೀಲ, ಅಮರ ಬಿಸನಾಳ, ಸಚಿನ ಚಿನವಾಲ, ಆಕಾಶ ಕಲಬುರ್ಗಿ, ರಾಜು ಚವ್ಹಾಣ ಸೇರಿದಂತೆ ತಿಕೋಟಾ,ಬಬಲೇಶ್ವರ ಮತ್ತು ವಿಜಯಪುರ ತಾಲೂಕುಗಳ ನಾನಾ ಗ್ರಾಮಗಳ ಸಾವಿರಾರು ಯುವಕರು ಉಪಸ್ಥಿತರಿದ್ದರು.

ಯುವ ಮುಖಂಡರಾದ ಶಿವಾನಂದ ಹಂಜಗಿ ಸ್ವಾಗತಿಸಿದರು. ಪ್ರಶಾಂತ ಝುಂಡೆ ನಿರೂಪಿಸಿದರು.




### ಗಮನ ಸೆಳೆದ ಭವ್ಯ ಮೆರವಣಿಗೆ

ಈ ಕಾರ್ಯಕ್ರಮಕ್ಕೂ ಮುಂಚೆ ವಿಧಾನ ಪರಿಷತ ಶಾಸಕ ಸುನೀಲಗೌಡ ಪಾಟೀಲ ಅವರನ್ನು ಯುವಕರು ತೆರೆದ ವಾಹನದಲ್ಲಿ ಮೆರವಣಿಗೆ ನಡೆಸಿದರು.

ದಾರಿಯುದ್ದಕ್ಕೂ ಹೂಮಳೆ ಸುರಿಸಿದ ಯುವಕರು, ಅಬ್ಬರದ ಸಂಗೀತ, ಹಲಗೆ ವಾದನ ಸೇರಿದಂತೆ ನಾನಾ ಸಂಗೀತ ವಾದ್ಯಗಳೊಂದಿಗೆ ವೇದಿಕೆವರೆಗೆ ಮೆರವಣಿಗೆ ನಡೆಸಿದರು.

# ಕಾರು ಅಪಘಾತ: ಪೊಲೀಸ್ ಇಲಾಖೆ ಜೆಎಚ್‌ಓ ಸಾವು!

■ ಉದಯರಶ್ಮಿ ದಿನಪತ್ರಿಕೆ

ತಾಳಿಕೋಟೆ: ಹೈದ್ರಾಬಾದ್‌ದಿಂದ ಮಗಳನ್ನು ಕರೆದುಕೊಂಡು ತಾಳಿಕೋಟೆ ಮಾರ್ಗವಾಗಿ ಬಾಗಲಕೋಟೆಗೆ ತರಳುತ್ತಿದ್ದ ಸಮಯದಲ್ಲಿ ತಾಳಿಕೋಟೆ ಸಮಿಪದಲ್ಲಿ ಆಲದಮರಕ್ಕೆ ಕಾರು ಡಕ್ಕಿಯಾಗಿ ತಂದೆ ಬಾಗಲಕೋಟೆ ಜಿಲ್ಲಾ ಪೊಲೀಸ್ ಕಚೇರಿಯಲ್ಲಿ ಜೆಎಚ್‌ಓ ಆಗಿ ಕಾರ್ಯನಿರ್ವಹಿಸುತ್ತಿದ್ದ ನಿಸಾರಹಮ್ಮದ ಅಬ್ದುಲ್‌ರಜಾಕ ಹಿಪ್ಪರಗಿ(50) ಸ್ಥಳದಲ್ಲಿಯೇ ಸಾವನಪ್ಪಿದ ಘಟನೆ ಸೋಮವಾರ ನಸುಕಿನ ಜಾವ 2 ಗಂಟೆಯ ಸುಮಾರಿಗೆ ನಡೆದಿದೆ. ನಿಸಾರಹಮ್ಮದ ಹಿಪ್ಪರಗಿ ಇವರು ಮಗಳಾದ ನೇಹಾ ಎಂಬವಳನ್ನು ಹೈದ್ರಾಬಾದ್‌ಗೆ ಐಪಿಎಸ್ ಕೋಚಿಂಗ್ ಬಿಟ್ಟಿದ್ದು ನಂತರ ಕೋಚಿಂಗ್ ನಂತರ ಹೈದ್ರಾಬಾದನಲ್ಲಿಯೇ ಐಪಿಎಸ್ ಪರಿಕ್ಷೆ ಮುಗಿದಿದ್ದರಿಂದ ಸ್ನೇಹಿತ ಬಸವರಾಜ ಸೊನಾ ಎಂಬವರ ಜೊತೆಗೂಡಿ ಮಗಳಾದ ನೇಹಾಳನ್ನು ಕರೆದುಕೊಂಡು ಬರುತ್ತಿದ್ದರೆನ್ನಲಾಗಿದ್ದು ತಾಳಿಕೋಟೆ ಸಮಿಪ ಬರುತ್ತಿದ್ದಾಗ ಕರವಿಂಗ್‌ನಲ್ಲಿ ನಿಸಾರಹಮ್ಮದನ ಅಜಾಗರುಕತೆ ಕಾರು ಚಲಾವಣೆಯಿಂದ ಬಲಗಡೆ ಇರುವ ಆಲದಮರಕ್ಕೆ ಕಾರು ಡಿಕ್ಕಿಹೊಡೆದಿದ್ದರಿಂದ ಸ್ಥಳದಲ್ಲಿಯೇ ನಿಸಾರಹಮ್ಮದ ಹಿಪ್ಪರಗಿ ಸಾವನಪ್ಪಿದ್ದಾನೆಂದು ಮೃತನ ಅಳಿಯನಾದ ಅಜೀಜಹಮ್ಮದ ಕುಡಚಿ ಅವರು ತಾಳಿಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಅಪಘಾತದ ಸಮಯದಲ್ಲಿ ಕಾರಿನಲ್ಲಿದ್ದ ಮಗಳಾದ ನೇಹಾ(22) ಮತ್ತು ಅಪಘಾತದಲ್ಲಿ ಮೃತಪಟ್ಟ ನಿಸಾರಹಮ್ಮದನ ಸ್ನೇಹಿತ ಎಎಸ್‌ಐ ಬಸವರಾಜ ಸೋನಾ(ಪೊಲೀಸ್ ಇಲಾಖೆ)(51) ಇವರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಇಬ್ಬರನ್ನೂ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ಸ್ಥಳಕ್ಕೆ ಡಿವಾಯ್‌ಎಸ್‌ಪಿ ಚಂದ್ರಕಾಂತ ನಂದರೆಡ್ಡಿ, ಸಿಪಿಐ ಮಹ್ಮದ ಪಸೀಉದ್ದೀನ, ಪಿಎಸ್‌ಐ ಶ್ರೀಮತಿ ಜ್ಯೋತಿ ಖೋತ್, ಅಪರಾಧ ವಿಭಾಗದ ಪಿಎಸ್‌ಐ ಎಸ್.ಎಂ.ಪಡಶೆಟ್ಟಿ ಬೆಟ್ಟಿ ನೀಡಿ ಮುಂದಿನ ತನಿಖೆ ಕೈಗೊಂಡಿದ್ದಾರೆ.



■ ಉದಯರಶ್ಮಿ ದಿನಪತ್ರಿಕೆ

# ಸರ್ಕಾರಿ ಪ್ರಥಮ ದರ್ಜೇ ಕಾಲೇಜಿನಲ್ಲಿ ಹೊಸ ಕೋರ್ಸ್ ಆರಂಭ

ವಿಜಯಪುರ: ಇಲ್ಲಿನ ಸರ್ಕಾರಿ ಪ್ರಥಮ ದರ್ಜೇ ಕಾಲೇಜಿನಲ್ಲಿ ಪ್ರಸಕ್ತ ಸಾಲಿನಲ್ಲಿ ಬಿ.ಕಾಂ (ಎ.ಇ.ಡಿ.ಪಿ) ಬ್ಯಾಂಕಿಂಗ್ ಹಣಕಾಸು ಸೇವೆಗಳು ಹಾಗೂ ವಿಮೆ (ಇನ್ಸುರೆನ್ಸ್) ಪದವಿ ಕೋರ್ಸ್ನ್ನು ಆರಂಭಿಸಲಾಗಿದೆ.

ಈ ನೂತನ ಕೋರ್ಸಿನ ಪ್ರಮುಖ ವೈಶಿಷ್ಟ್ಯಗಳೆನೆಂದರೆ ವಿದ್ಯಾರ್ಥಿಗಳಿಗೆ ಮೊದಲ 2ವರ್ಷಗಳ ವರೆಗೆ ತರಗತಿ ಮತ್ತು ಪರೀಕ್ಷೆ ಇರಲಿವೆ. 3ನೇ ವರ್ಷ ಪೂರ್ಣ ಪ್ರಮಾಣದ ತರಬೇತಿ ನೀಡಲಾಗುತ್ತಿದ್ದು ಈ ಅವಧಿಯಲ್ಲಿ ರೂ.8 ಸಾವಿರದಿಂದ 15 ಸಾವಿರ ರೂವರೆಗೆ ಸ್ಟೈಫಂಡ್ ನೀಡಲಾಗುವುದು. ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಗುವುದು. 3ವರ್ಷ ಪೂರ್ಣಗೊಂಡ ನಂತರ ಬಿ.ಕಾಂ ಪದವಿ ಆಧಾರದ ಮೇಲೆ ಎಮ್ ಕಾಂ ಮತ್ತು ಎಂ.ಬಿ.ಎ ಸ್ನಾತ್ತಕೋತ್ತರ ವಿದ್ಯಾಭ್ಯಾಸ ಮುಂದುವರೆಸಲು ಅವಕಾಶವಿರುತ್ತದೆ. ಇದರ ಸದುಪಯೋಗ ಪಡೆದುಕೊಳ್ಳುವಂತೆಯೂ ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಪ್ರಥಮ ದರ್ಜೆ ಕಾಲೇಜ್ ಪ್ರಾಂಶುಪಾಲರ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.



# ಡಿಸೈಲ್ ಅಭಾವ ವದಂತಿ: ಪಂಪ್‌ಗಳ ಮುಂದೆ ಜನರ ಸಾಲು

■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ಪಟ್ಟಣದಲ್ಲಿ ಡಿಸೈಲ್ ಅಭಾವದ ಕಾರಣದಿಂದಾಗಿ ತೈಲ ವಿತರಣಾ ಕೇಂದ್ರ( ಪೆಟ್ರೋಲ್ ಪಂಪ್)ಗಳ ಮುಂದೆ ವಾಹನಗಳು ಸಾಲುಗಟ್ಟಿ ನಿಂತು ಚಾಲಕರು, ಮಾಲೀಕರು ಪರದಾಡುವಂತಾಯಿತು.

ಪಟ್ಟಣದಲ್ಲಿ ಪೆಟ್ರೋಲ್ ದೊರೆಯುತ್ತಿದೆ ಆದರೆ ಡಿಸೈಲ್ ಕೊರತೆ ಉಂಟಾಗಿದೆ ಎಂಬ ಸುದ್ದಿ ಹರಡುತ್ತಿದ್ದಂತೆಯೇ ಕ್ಯಾನ್ ಗಳೊಂದಿಗೆ ವಾಹನಗಳ ಮಾಲೀಕರು ಹಾಗೂ ಚಾಲಕರು ಪಂಪ್‌ಗಳ ಮುಂದೆ ಜಮಾಯಿಸಿದರು. ಇದರಿಂದ ಜನದಟ್ಟಣೆ ಹೆಚ್ಚಾಗಿದ್ದು ಕಂಡು ಬಂದಿತು. ಜೊತೆಗೆ ಕ್ಟರ್‌ಗಳ ಮಾಲೀಕರು ಸಹ ತಮಗೆ ಅಗತ್ಯವಾದ ಡಿಸೈಲ್ ಕೊಳ್ಳಲು ಸಾಲಾಗಿ ನಿಲ್ಲಿಸಿದರು. ಇದರಿಂದ ವಿಚಲಿತರಾದ ಪಂಪ್ ಸಿಬ್ಬಂದಿ ಕ್ಯಾನ್‌ಗಳಿಗೆ ಹಾಗೂ ಕ್ಟರ್‌ಗಳಿಗೆ ತಲಾ ಎರಡು ಸಾವಿರ ಮೌಲ್ಯದ ಹಾಗೂ ಟಿಪ್ಪರಗಳಿಗೆ ಐದು ಸಾವಿರ ಮೌಲ್ಯದ ಡಿಸೈಲ್ ವಿತರಿಸುವ ಮೂಲಕ ಸಮಾಧಾನಪಡಿಸಿದರು.

ಇನ್ನೂ ಕೆಲವು ಪಂಪ್‌ಗಳಲ್ಲಿ ಡಿಸೈಲ್ ನೋಸ್ಟಾಕ್ ಎಂಬ ಫಲಕ ತೂಗು ಹಾಕಿದ್ದು , ಇರುವ ಪಂಪ್‌ಗಳಲ್ಲಿ ಗದ್ದಲ ಉಂಟಾಗಲು ಕಾರಣವಾಯಿತು.

ಡಿಸೈಲ್ ಪಡೆಯಲು ಯಾವುದೇ ಧಾವಂತ ಬೇಡ , ಸಮಾಧಾನದಿಂದ ಪಡೆಯೋಣ ಎಂದು ವಾಹನಗಳ ಮಾಲೀಕರು ಎಲ್ಲರನ್ನೂ ಸಮಾಧಾನ ಪಡಿಸಿದರು.

ಈ ಸಂದರ್ಭದಲ್ಲಿ ಕಾಶೀನಾಥ ಕೋರಿ, ಭೀಮನಗೌಡ ಬಿರಾದಾರ, ಮಹೇಶ ಯಾಳಗಿ, ಮಂಜುನಾಥ ಇಂಡಿ, ರಫೀಕ ನಡುವಿನಮನಿ, ಹುಸೇನಿ ವಿಜಯಪುರ, ಹುಚ್ಚಪ್ಪ ಹರಿಜನ, ಉಮೇಶ ಕೋಟಿನ್ ಇದ್ದರು.

# ಇಚ್ಛಾಶಕ್ತಿಯೇ ಸಾಧನೆಗೆ ಮೆಟ್ಟಿಲಾಗಬೇಕು :ಡಾ.ಭಾರತಿ



■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ:ಸ್ಟುಡೆಂಟ್ ಲೈಫ್ ಇಸ್ ಗೋಲ್ಡನ್ ಲೈಫ್ ಮತ್ತು ಅತ್ಯಂತ ಮಹತ್ವದ ಘಟ್ಟವಾಗಿದ್ದು, ವಿದ್ಯಾರ್ಥಿ ಜೀವನವು ಅಮೂಲ್ಯವಾದ ಘಟ್ಟವಾಗಿದ್ದು, ಉದಾತ್ತ ಗುರಿ ಹೊಂದುತ್ತಾ, ಆಗುರಿಯ ಸಾಧನೆಯತ್ತ ಕಠಿಣ ಪರಿಶ್ರಮ, ನಿರಂತರ ಅಧ್ಯಯನ, ಸಾಧಿಸಿಯೇ ತೀರುತ್ತೇನೆಂಬ ದೃಢ ಸಂಕಲ್ಪದೊಂದಿಗೆ ಹೆಜ್ಜೆಯಿಟ್ಟರೆ ಖಂಡಿತವಾಗಿಯೂ ಯಶಸ್ಸು ಗಳಿಸಬಹುದು ಎಂದು ಎ.ಎಸ್.ಪಿ. ಕಾಲೇಜಿನ ವಾಣಿಜ್ಯಶಾಸ್ತ್ರ ಪ್ರಾಧ್ಯಾಪಕಿ ಡಾ.ಭಾರತಿ ಮಠ ಅವರು ಅಭಿಪ್ರಾಯಪಟ್ಟರು.

ಅವರು ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ:23–09–2025 ರಂದು ವಾಣಿಜ್ಯಶಾಸ್ತ್ರ ವಿಭಾಗದಿಂದ ಆಯೋಜಿಸಿದ ಶುಭ ಹಾರೈಕೆ (ಬಿ.ಕಾಂ ಅಂತಿಮ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು.

ವಿದ್ಯಾರ್ಥಿದೆಸೆಯಲ್ಲಿ ಎದುರಾಗುವ ಸಂಕಷ್ಟಗಳನ್ನು ಮೀರಿ ತಮ್ಮ ಕನಸುಗಳನ್ನು ನನಸಾಗಿಸಲು ಹಾಗೂ ಸಾಧನೆಯ ಮೇರು ಶಿಖರವನ್ನು ಮುಟ್ಟಲು ಅದಕ್ಕೆ ಬೇಕಾದ ಪೂರ್ವ ತಯಾರಿ, ಯೋಜನೆ, ಯೋಚನೆ ಮತ್ತು ಸದಾಲೋಚನೆ ಮತ್ತು ಸಮಯ ನಿರ್ವಹಣೆ ಮಾಡಬೇಕು. ನಾನು ಸಮರ್ಥ, ಸಶಕ್ತನೆಂಬ ಆತ್ಮ ವಿಶ್ವಾಸದೊಂದಿಗೆ ಮುನ್ನಡೆದರೆ ಅಧ್ಯಯನ ಶೀಲರಾದರೆ ಯಶಸ್ಸು ಕಟ್ಟಿಟ್ಟ ಬುತ್ತಿ. ಉನ್ನತ ಶಿಕ್ಷಣ ಪೂರೈಸಿದ ನಂತರ ಮುಂದೇನು ಎಂಬ ಆತಂಕಪಡದೇ ಸ್ಪರ್ಧಾತ್ಮಕ ಯುಗದಲ್ಲಿ ಉದ್ಯೋಗಾವಕಾಶ ಪಡೆಯಲು ಬೇಕಾದ ಸಂದರ್ಶನ ಕಲೆ, ಕೌಶಲ್ಯ, ನೈಪುಣ್ಯತೆ, ವಿಶ್ಲೇಷಣೆ–ತಾರ್ಕಿಕ ಶಕ್ತಿ ಮತ್ತು ಕಾರ್ಪೋರೇಟ್ ಜಗತ್ತು ಅಪೇಕ್ಷಿತವಾದ ಕೌಶಲ್ಯಗಳನ್ನು ಪಡೆದುಕೊಳ್ಳಬೇಕು. ವಾಣಿಜ್ಯ ಪದವಿ ನಂತರ ಚಾರ್ಟರ್ಡ್ ಅಕೌಂಟಂಟ್, ಕಂಪನಿ ಸೆಕ್ರೆಟರಿ, ಐ.ಸಿ.ಡಬ್ಲ್ಯೂ.ಎ. ಫೈನಾನ್ಸಿಯಲ್ ಅನಾಲಿಸ್ಟ್, ಮಾರ್ಕೆಟಿಂಗ್ ಮ್ಯಾನೇಜರ್, ಐ.ಬಿ.ಪಿ.ಎಸ್. ನಂತರ ಸ್ಪರ್ಧಾತ್ಮಕ ಮತ್ತು ವೃತ್ತಿಪರ ಪರೀಕ್ಷೆಗಳಲ್ಲಿ ಸಾಫಲ್ಯ ಹೊಂದಿದರೆ ಉದ್ಯೋಗ ದೊರೆಕಲಿವೆ ಎಂದು ಕಿವಿಮಾತು ಹೇಳಿದರು.

ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ.ಎಸ್.ಖೊದ್ನಾಪೂರ ಮಾತನಾಡುತ್ತಾ, ನಿಮ್ಮಲ್ಲಿರುವ ಭರವಸೆಯೇ ಜೀವನವನ್ನು ಮುನ್ನಡೆಸುವ ಇಂಧನವಾಗಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿ ತೀವ್ರ ಪೈಪೋಟಿಯಿದ್ದು, ಎದುರಾಗುವ ಸವಾಲುಗಳನ್ನು ಸಮರ್ಥವಾಗಿ ಎದು–ರಿಸುವ ಆತ್ಮಸ್ಥೆಣಟಿಜಜಜಟಿಜಜರ್ಯವನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳು ಉತ್ಕೃಷ್ಟ ಗುಣಮಟ್ಟದ ಜ್ಞಾನ ಪಡೆದುಕೊಂಡು ತಮ್ಮ ಉನ್ನತ ವ್ಯಾಸಂಗ ಕೈಕೊಂಡು ಮತ್ತು ವಿದ್ಯಾರ್ಥಿಗಳ ಭಾವಿ ಭವಿಷ್ಯವು ಉಜ್ವಲವಾಗಲಿ, ಕಂಡ ಕನಸು ನನಸಾಗಲೆಂದು ಹಾರೈಸಿದರು.

ಹಿರಿಯ ಪ್ರಾಧ್ಯಾಪಕ ಡಾ. ಚಿದಾನಂದ ಆನೂರ ಮಾತನಾಡಿದರು.

ಸಮಾರಂಭದಲ್ಲಿ ಪ್ರಾಂಶುಪಾಲ ಡಾ, ಎ.ಐ.ಹಂಜಗಿ, ಡಾ. ಚಂದ್ರಕಾಂತ.ಬಿ, ಮತ್ತು ಡಾ. ಮಮತಾ ಬನ್ನೂರ, ಇನ್ನಿತರರು ಸಹ ವೇದಿಕೆಯ ಮೇಲಿದ್ದರು. ಬಿ.ಕಾಂ 6 ನೇಯ ಸೆಮೆಸ್ಟರ್‌ನ ಕವಿತಾ ಕಂಟೇನವರ, ಗೀತಾ ಮಿಸ್ಕಿನ್ ಮತ್ತು ಐಶ್ವರ್ಯ ಕುಂಬಾರ ಇವರು ತಮ್ಮ ಮೂರು ವರ್ಷಗಳ ವಿದ್ಯಾರ್ಥಿ ಜೀವನದ ಸವಿ ನೆನಪುಗಳ ಬಗ್ಗೆ ಅನಿಸಿಕೆ ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಡಾ. ದೇವೆಂದ್ರಗೌಡ ಪಾಟೀಲ, ಪ್ರೊ. ವಿಶ್ವನಾಥ ಕಲ್ಮೇಶರ, ಡಾ. ಎಸ್.ಡಿ.ಬಿರಾದಾರ ಇನ್ನಿತರರು ಉಪಸ್ಥಿತರಿದ್ದರು.

ಕವಿತಾ ಬಸರಿಗಿಡದ & ಮದೀನಾ ತುಂಬದ ಪ್ರಾರ್ಥಿಸಿದರು. ಅಂಬಿಕಾ ಮುಳಸಾವಳಗಿ ಸ್ವಾಗತಿಸಿ, ಅತಿಥಿಗಳ ಪರಿಚಯ ನಡೆಸಿಕೊಟ್ಟರು. ಗೌರಮ್ಮ ಲೋಗಾವಿ, ಲಕ್ಷ್ಮಿ ಕೋಳಿ ನಿರೂಪಿಸಿದರು. ಸಂಗಮೇಶ ಗುಡ್ಡದ ವಂದಿಸಿದರು.

## ಕೆರೆಗಳಲ್ಲಿ ನೀರು ಸಂಗ್ರಹ । ಹೆಚ್ಚಿದ ಬಾವಿ, ಕೊಳವೆ ಬಾವಿಗಳ ಅಂತರ್ಜಲಮಟ್ಟ । ಕಡಿಮೆಯಾದ ಕುಡಿವ ನೀರಿನ ತಾಪತ್ರಯ

# ತಂಪೆರೆದ ಕೃತ್ತಿಕಾ ಮಳೆ: ಬಿತ್ತನೆ ಕಾರ್ಯ ಚುರುಕುಗೊಳಿಸಿದ ರೈತರು

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಇಲಾಹಿ ಇ. ಜಮಖಂಡಿ



ಚಿಮ್ಮಡ: ಮಂಗಳವಾರ ಹಾಗೂ ಶುಕ್ರವಾರ ರಾತ್ರಿ ಸುರಿದ ಕೃತ್ತಿಕಾ ಮಳೆಯಿಂದ ಈ ಭಾಗದಲ್ಲಿ ವಾತಾವರಣವೇ ತಂಪೆರೆದಂತಾಗಿದ್ದು ರೈತರ ಮೊಗದಲ್ಲಿ ಸಂತಸ ಮೂಡಿಸಿದೆ ಅವರು ಖುಷಿಯಿಂದಲೇ ತಮ್ಮ ಬಿತ್ತನೆ ಕಾರ್ಯಕ್ಕೆ ಅಣಿಯಾಗಿದ್ದಾರೆ.

ಕಳೆದ ಒಂದು ತಿಂಗಳಿನಿಂದ ಜಮೀನು ಹದಮಾಡಿಕೊಂಡು ಮಳೆಗಾಗಿ ಜಾತಕ ಪಕ್ಷಿಯಂತೆ ಕಾಯುತಿದ್ದ ರೈತರಿಗೆ ಈ ವಾರದಲ್ಲಿ ಸುರಿದ ಮಳೆ ಅವರಲ್ಲಿ ಆಶಾ ಭಾವನೆ ಮೂಡಿಸಿದ್ದು ವರುಣದೇವನ ಮೇಲೆ ಭಾರ ಹಾಕಿ ಬಹುತೇಕ ರೈತರು ಬಿತ್ತನೆ ಪ್ರಾರಂಭಿಸಿದ್ದಾರೆ.

ಎಪ್ರಿಲ್ ನಲ್ಲಿಯೇ ಸುರಿಯುವ ಅಶ್ವಿನಿ, ಭರಣಿಮಳೆಗೆರೈತರುತಮ್ಮಜಮೀನುಗಳನ್ನು ಹದಗೊಳಿಸಿ ತಿಪ್ಪೆಗೊಬ್ಬರವನ್ನು ಗದ್ದೆಗಳಲ್ಲಿ ಮಿಶ್ರಣಗೊಳಿಸುತ್ತಿದ್ದರು, ಆದರೆ ಅವೆರಡೂ ಮಳೆಗಳು ಕೈಕೊಟ್ಟ ಪರಿಣಾಮ ರೈತರಲ್ಲಿ ಆತಂಕ ಮೂಡಿಸಿತ್ತು ಆದರೆ ಕೃತ್ತಿಕಾ ಮಳೆ ಸಕಾಲಕ್ಕೆ ಸುರಿದ ಪರಿಣಾಮ ಈ ಬಾಇ ಬಿತ್ತನೆ ಕಾರ್ಯವೂ ಸರಿಯಾದ ಸಮಯಕ್ಕೆ ನಡೆಯುತ್ತಿದೆ ಅಲ್ಲದೇ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿ ಇಲ್ಲಿನ ಘಟಪ್ರಭಾ ಎಡದಂಡೆ ಕಾಲುವೆಗೆ ಹತ್ತು ದಿನದಂತೆ ಎರಡುಬಾರಿ ನೀರು ಹರಿಸಲಾಗಿದ್ದರಿಂದ ಕೆರೆಗಳಲ್ಲಿ ನೀರು ಸಂಗ್ರಹಿಸಲಾಗಿದ್ದು ಇದರಿಂದ ಬಾವಿ, ಕೊಳವೆ ಬಾವಿಗಳ ಅಂತರ್ಜಲಮಟ್ಟ ಹೆಚ್ಚಿದ್ದು ಕುಡಿಯುವ ನೀರಿನ ತಾಪತ್ರಯ ಈ ಬಾರಿ ಕಡಿಮೆಯಾದಂತಾಗಿದೆ. ಶುಕ್ರವಾರ ರಾತ್ರಿ ಸುರಿದ ಮಳೆ ಈ ಭಾಗದಲ್ಲಿ ಕಳೆದ ಎರಡು ತಿಂಗಳಿನಿಂದ ಬಿಸಿಲ ಬೇಗೆಯಿಂದ ತತ್ತರಿಸುತಿದ್ದ ಜನ–ರಿಗೆ ಧಗೆಯಿಂದ ಮುಕ್ತಿದೊರೆತಂತಾಗಿದ್ದು. ರೈತರು ಹರ್ಷಗೊಂಡಿದ್ದಾರೆ. ಈಗ ಬಹುತೇಕ ರೈತರು ಬಿತ್ತನೆ ಕಾರ್ಯವನ್ನು ಚುರುಕುಗೊಳಿಸಿದ್ದು. ಇದರಿಂದ ಕಳೆದ ಎರಡು ತಿಂಗಳಿನಿಂದ ಕೆಲಸವಿಲ್ಲದೆ ಕಂಗಾಲಾಗಿದ್ದ ಕೂಲಿಕಾರರಿಗೆ ಕೆಲಸ ದೊರೆತಿದ್ದು ಅವರೂ ಖುಷಿಯಿಂದಲೇ ಗದ್ದೆಗಳತ್ತ ಹೆಜ್ಜೆ ಹಾಕುತಿದ್ದಾರೆ.

> "ಘಟಪ್ರಭಾ ಎಡದಂಡೆ ಕಾಲುವೆಗೆ ಎರಡುಬಾರಿ ನೀರು ಹರಿಸಿದ್ದರಿಂದ ಹಾಗೂ ಸಕಾಲಕ್ಕೆ ಕೃತ್ತಿಕಾ ಮಳೆ ಸುರಿದದ್ದು ಬಿತ್ತನೆಕಾರ್ಯಕ್ಕೆಅನುಕೂಲಕರವಾಗಿದ್ದು, ಕೆರೆ, ಬೋರವೆಲ್, ಬಾವಿಗಳಲ್ಲಿ ಅಂತರ್ಜಲಮಟ್ಟ ಹೆಚ್ಚಾಗಿದೆ, ಈ ಬಾರಿ ಅರಿಷಿನ, ಕಬ್ಬು ಸೇರಿದಂತೆ ಹಲವು ಬೆಳೆಗಳ ಬಿತ್ತನೆ ಕಾರ್ಯ ಪ್ರಾರಂಭಿಸಿದ್ದು, ಮುಂಬರುವ ರೋಹಿನಿ, ಮೃಗಶಿರ ಮಳೆಗಳು ಸಮರ್ಪಕವಾಗಿ ಸುರಿದರೆ ಈ ವರ್ಷದ ಬರಗಾಲ ಛಾಯೆಯಿಂದ ರೈತರು ಬಚಾವಾಗಲಿದ್ದಾರೆ."
>
> ■ ವಿನಾಯಕ ಹಟ್ಟಿ
> ಯುವ ರೈತರು ಚಿಮ್ಮಡ

# ಇಂಡಿ: ಬಿರುಗಾಳಿ–ಮಳೆಗೆ ವಿವಿಧೆಡೆ ಅಪಾರ ಬೆಳೆ ಹಾನಿ!

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ಶನಿವಾರ ರಾತ್ರಿ ಸುರಿದ ಗುಡುಗು–ಗಾಳಿ ಸಹಿತ ಮಳೆಗೆ ತಾಲೂಕಿನ ವಿವಿಧೆಡೆ ಸಾಕಷ್ಟು ಬೆಳೆ ಹಾನಿಯಾಗಿವೆ.

ತಾಲೂಕಿನ ಸಾಲೋಟಗಿ ಗ್ರಾಮದ ರೈತ ಧರ್ಮರಾಯ ಚನ್ನಪ್ಪ ನರಳೆ ಇವ–ರಿಗೆ ಸೇರಿದ 2055 ಬಾಳೆ ಗಿಡಗಳು ಮತ್ತು ಸಿದ್ದು ದೇವೆಂದ್ರ ನರಳೆ ಇವರಿಗೆ ಸೇ–ರಿದ 1950 ಬಾಳೆ ಗಿಡಗಳು ಸಂಪೂರ್ಣ ನೆಲಸಮವಾಗಿವೆ.

ಬಾಳೆ ಗಿಡಗಳು ಕೇವಲ 15 ದಿನದಲ್ಲಿ ಮಾರಾಟಕ್ಕೆ ಹೋಗುವ ಸ್ಥಿತಿಯಲ್ಲಿ ಇದ್ದವು. ಹೀಗಾಗಿ ರೈತನ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಸಸಿ ನೆಟ್ಟು, ಗೊಬ್ಬರಹಾಕಿ, ಔಷಧಿ ಸಿಂಪರಣೆ ಮಾಡಿದ್ದ ರೈತರಿಗೆ ತಾವು ಖರ್ಚು ಮಾಡಿದ ಹಣವೂ ಸಹ ಕೈಗೆ ಸಿಗದಂತಾಗಿದೆ.

ತಾಲೂಕಿನ ತಾಂಬಾ ಗ್ರಾಮದ ರೈತ ಮಹಿಳೆ ಕಸ್ತೂರಬಾಯಿ ಈರಣ್ಣ ತೆಗ್ಗೆಳ್ಳಿ ಅವರ 1 ಎಕರೆ ಜಮೀನಿನಲ್ಲಿ ಬೆಳೆದ ಡ್ರೈಗನ್ ಬೆಳೆ ಸಂಪೂರ್ಣವಾಗಿ ನೆಲಕ್ಕುರುಳಿವೆ.

ತಾಲೂಕಿನ ಶಿರಗೂರ ಇನಾಂ ಗ್ರಾಮದ ಸಿದರಾಯ ದೇವಸ್ಥಾನದ ಆವರಣದಲ್ಲಿ 80 ಲಕ್ಷ ರೂವೆಚ್ಚದಲ್ಲಿ ನಿರ್ಮಾಣ ಹಂತದಲ್ಲಿರುವ ಮಾಲಗಂಬ 44 ಅಡಿ ನಿರ್ಮಾಣವಾಗಿತ್ತು. ಅಂದಾಜು 40 ಲಕ್ಷಕ್ಕೂ ಹೆಚ್ಚಿನ ಹಣ ಖರ್ಚಾಗಿದ್ದು ರಾತ್ರಿ ಬೀಸಿದ ಗಾಳಿಯಲ್ಲಿ ನೆಲಕ್ಕುರುಳಿದ್ದು, ದೇವಸ್ಥಾನದ ಕೋಣೆ ಮತ್ತು ಸಾರ್ವಜನಿಕರೋರ್ವರ ಮನೆ ಮತ್ತು ಪತ್ರಾಸ್ ಶೇಡ್ ಮೇಲೆ ಮಾಲಗಂಬ ಬಿದ್ದು ಹಾನಿಯಾಗಿದೆ.ತಾಲೂಕಿನ ಸಾಲೋಟಗಿ ಗ್ರಾಮದ ರೈತರ ಜಮೀನಿಗೆ ಜೆಡಿಎಸ್ ಧು–ರೀಣರಾದ ಬಿ.ಡಿ.ಪಾಟೀಲ ಭೇಟಿ ನೀಡಿದ್ದು ಪ್ರಕೃತಿ ವಿಕೋಪ ಪರಿಹಾರದ ಅಡಿಯಲ್ಲಿ ರೈತರಿಗೆ ಪರಿಹಾರ ನೀಡಲು ಆಗ್ರಹಿಸಿದ್ದಾರೆ.

> ಬಿರುಗಾಳಿ ಹಾಗೂ ಮಳೆಯಿಂದ ಹಾನಿಯಾದ ತೋಟಗಾರಿಕೆ ಬೆಳೆಗಳ ಮಾಹಿತಿ ಪಡೆಯಲಾಗುತ್ತಿದೆ. ಗ್ರಾಮ ಆಡಳಿತಾಧಿಕಾ–ರಿಗಳು ಹಾಗೂ ತೋಟಗಾ–ರಿಕೆ ಇಲಾಖೆಯ ಸಹಯೋಗದಲ್ಲಿ ಸರ್ವೇ ನಡೆಸಲಾಗುತ್ತಿದೆ. ಸರ್ವೇ ನಡೆಸಿ ಮೇಲಾಧಿಕಾರಿಗಳಿಗೆ ಕಳುಹಿಸಿ ಕೊಡುತ್ತೇವೆ."
>
> ■ ಹೆಚ್.ಎಸ್. ಪಾಟೀಲ
> ಹಿರಿಯ ನಿರ್ದೇಶಕರು,
> ತೋಟಗಾರಿಕೆ ಇಲಾಖೆ ಇಂಡಿ.



## ಇಂಡಿ ನಗರದಲ್ಲಿ 26.6 ಎಂ.ಎಂ ಮಳೆ

ಶನಿವಾರ ರಾತ್ರಿ ಇಂಡಿ ನಗರದಲ್ಲಿ 26.6 ಎಂ.ಎಂ, ನಾದ ಬಿ.ಕೆ. 8 ಎಂ.ಎಂ, ಅಗರಖೇಡ 13.3 ಎಂ.ಎಂ, ಹೋರ್ತಿ 19.7 ಎಂ.ಎಂ, ಚಡಚಣ 14.2 ಎಂ.ಎಂ ಮಳೆಯಾಗಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಮಹಾದೇವಪ್ಪ ಏವೂರ ತಿಳಿಸಿದ್ದಾರೆ.

# ಶಿಕ್ಷಕರ ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ

■ ಉದಯರಶ್ಮಿ ದಿನಪತ್ರಿಕೆ

ಚಡಚಣ: ಕರ್ನಾಟಕ ರಾಜ್ಯ ಪ್ರಾಥ–ಮಿಕ ಶಾಲಾ ಶಿಕ್ಷಕ ಸಂಘದ ಚಡಚಣ ತಾಲೂಕು ಘಟಕದ ನೂತನ ಅಧ್ಯಕ್ಷ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ಶನಿವಾರ ತಾಲೂಕಿನ ಶಿಕ್ಷಕರ ಸೊಸೈಟಿ ಸಭಾಂಗಣದಲ್ಲಿ ನೆರವೇ–ರಿತು.



ಸತತ ನಾಲ್ಕನೇ ಬಾರಿ ಅವಿರೋಧವಾಗಿ ತಾಲೂಕು ಘಟಕದ ಅಧ್ಯಕ್ಷರಾಗಿ ಆಯ್ಕೆಯಾದ ಎ.ಎಸ್. ಸೊನ್ನಗಿ ಅವರು ಅಧಿಕಾರ ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ನೂತನ ಪದಾಧಿಕಾರಿಗಳೂ ಅಧಿಕೃತವಾಗಿ ಜವಾಬ್ದಾರಿ ವಹಿಸಿಕೊಂಡರು.

ಸಂಘದಪ್ರಧಾನಕಾರ್ಯದರ್ಶಿಯಾಗಿ ಬಿ.ಸಿ. ಉಮರಾಣಿ, ಗೌರವಾಧ್ಯಕ್ಷೆಯಾಗಿ ಆರ್.ಜೆ. ಬಿರಾದಾರ, ಉಪಾಧ್ಯಕ್ಷರಾಗಿ ಎಲ್.ಎಸ್. ಬಿರಾದಾರ, ಮಹಿಳಾ ಉಪಾಧ್ಯಕ್ಷೆಯಾಗಿ ಆರ್.ವ್ಹಿ. ಝಳಕಿ, ಖಜಾಂಚಿಯಾಗಿ ವ್ಹಿ.ಬಿ. ಭೈರಗೊಂಡ, ಸಹಕಾರ್ಯದರ್ಶಿಯಾಗಿ ಎಸ್.ಎಂ. ಬಗಲಿ, ಮಹಿಳಾ ಸಹಕಾರ್ಯದರ್ಶಿಯಾಗಿ ಎಸ್.ಪಿ. ಹಿರೇಮಠ, ಸಂಘಟನಾ ಕಾರ್ಯದರ್ಶಿಯಾಗಿ ಎಂ.ಎಸ್. ಅವಟಿ, ಮಹಿಳಾ ಸಂಘಟನಾ ಕಾರ್ಯದರ್ಶಿಯಾಗಿ ಎಸ್.ಎಸ್. ಸೂರಗೊಂಡ, ಕ್ರೀಡಾ ಕಾರ್ಯದರ್ಶಿಯಾಗಿ ರಿಯಾಜ್ ಅಹ್ಮದ್ ಮುಲ್ಲಾ, ಮಾಧ್ಯಮ ಸಂಚಾಲಕರಾಗಿ ಗೋಪಾಲ ಜಾಧವ ಹಾಗೂ ಜಿಲ್ಲಾ ಪ್ರತಿನಿಧಿಯಾಗಿ ಎಸ್.ಎಸ್. ಯಳಮೇಲಿ ಅಧಿಕಾರ ಸ್ವೀಕರಿಸಿದರು.

ಕಾರ್ಯಕ್ರಮದಲ್ಲಿ ತಾಲೂಕಿನ ವಿವಿಧ ಶಾಲೆಗಳ ನೂರಾರು ಶಿಕ್ಷಕರು, ಶಿಕ್ಷಣಾಭಿಮಾನಿಗಳು ಹಾಗೂ ಗಣ್ಯರು ಭಾಗವಹಿಸಿ ನೂತನ ಪದಾಧಿಕಾ–ರಿಗಳಿಗೆ ಶುಭಾಶಯ ಕೋರಿದರು. ಶಿಕ್ಷಕರ ಹಕ್ಕುಗಳ ರಕ್ಷಣೆ, ಶಿಕ್ಷಣದ ಗುಣಮಟ್ಟ ವೃದ್ಧಿ ಹಾಗೂ ಸಂಘದ ಬಲವರ್ಧನೆಗೆ ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡುವ ಅಗತ್ಯವಿದೆ ಎಂದು ಕಾರ್ಯಕ್ರಮದಲ್ಲಿ ಅಭಿಪ್ರಾಯ ವ್ಯಕ್ತವಾಯಿತು.

ಸಂಘದ ನೂತನ ಅಧ್ಯಕ್ಷ ಎ. ಎಸ್. ಸೊನ್ನಗಿ ಮಾತನಾಡಿ, ಶಿಕ್ಷಕರ ಸಮಸ್ಯೆಗಳ ಪರಿಹಾರ, ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿ ಹಾಗೂ ಸಂಘದ ಚಟುವಟಿಕೆಗಳನ್ನು ಮತ್ತಷ್ಟು ಬಲಪಡಿಸಲು ಪ್ರಾಮಾಣಿಕವಾಗಿ ಕೆಲಸ ಮಾಡುವುದಾಗಿ ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಶಿಕ್ಷಕ ಸತೀಶ ಬಗಲಿ ಸ್ವಾಗತಿಸಿದರು. ಡಿ.ಎಸ್. ಬಗಲಿ ಕಾರ್ಯಕ್ರಮ ನಿರೂಪಿಸಿದರು.

# ಬಣಜಿಗ ಸಮಾಜದಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ಆಲಮೇಲ: ತಾಲ್ಲೂಕಿನ ಬಣಜಿಗ ಕ್ಷೇಮಾಭಿವೃದ್ಧಿ ಸಂಘದಿಂದ ಜೂನ ತಿಂಗಳ ಕೊನೆಯ ವಾರ ಆಲಮೇಲ ಪಟ್ಟಣದಲ್ಲಿ ಸಮಾವೇಶ ಆಯೋಜನೆ ಮಾಡುತ್ತಿದ್ದು, ಸದರಿ ಸಮಾವೇಶದಲ್ಲಿ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಶೇ 90% ಕಿಂತ ಹೆಚ್ಚು ಅಂಕಗಳನ್ನು ಪಡೆದ ಬಣಜಿಗ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ತೀರ್ಮಾನಿಸಲಾಗಿದ್ದು, ಅರ್ಹರಾದ ಬಣಜಿಗ ಸಮಾಜದ ವಿದ್ಯಾರ್ಥಿಗಳು ಜೂನ 10 ರೊಳಗಾಗಿ ತಮ್ಮ ಆಧಾರಕಾರ್ಡ, ಎರಡುಭಾವಚಿತ್ರ, ಧೃಢೀಕೃತ ಅಂಕಪಟ್ಟಿಯೊಂದಿಗೆ ತಾಲ್ಲೂಕು ಅಧ್ಯಕ್ಷ ಸಿದ್ಧಲಿಂಗ ಸುಭೇದಾರ ಹಾಗೂ ಪ್ರಧಾನ ಕಾರ್ಯದರ್ಶಿ ರವಿ ವಾರದ ಅವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಂಪರ್ಕಕ್ಕಾಗಿ: 9972914151, 9741970555

■ ಉದಯರಶ್ಮಿ ದಿನಪತ್ರಿಕೆ

# ವಿಧಿಬರಹ

## ಭಾವರಶ್ಮಿ

'ಮನಸ್ಸಿದ್ದರೆ ಮಾರ್ಗ' ಎಂಬ ಮಾತನ್ನು ಎಲ್ಲಾ ಕೆಲಸಗಳಿಗೂ, ಎಲ್ಲಾ ಸಂದರ್ಭಕ್ಕು ಅನ್ವಯಿಸಿಕೊಳ್ಳಲಾಗುವುದಿಲ್. ಕೆಲವೊಮ್ಮೆ 'ಹಣೆಬರಹಕ್ಕೆ ಹೊಣೆ ಯಾರು' ಎಂದೂ ಸಹ ಹೇಳಿಕೊಂಡು ಸಮಾಧಾನ ಮಾಡಿಕೊಳ್ಳಬೇಕಾಗುತ್ತದೆ.

ಎಂಬುದನ್ನು ಈ ಕಥೆಗಳು ಹೇಳಹೊರಟಿವೆ.

ಅವರು ಮೂವರು ಮಕ್ಕಳು. ಮೂವರೂ ಸಹ ಒಳ್ಳೆಯ ನೌಕರಿ ಹಿಡಿದವರೆ. ಆದರೆ ಹಿರಿಯವ ತುಸು ಗಿಡ್ಡ. ಆದ್ದ–ರಿಂದಲೇ ಇರಬೇಕು ಅವನನ್ನು ವರಿಸಲು ಯಾವ ಮಧುಮಗಳು ಒಪ್ಪಲೇ ಇಲ್ಲ. ಅಗ್ರಜ ಮದುವೆ ಆಗುವವರೆಗೆ ಉಳಿದಿಬ್ಬರು ಆಗುವಂತಿಲ್ಲವಲ್ಲ.

'ಮದುವೆ ಆಗುವವರೆಗೆ ಹುಚ್ಚು ಬಿಡೋಲ್ಲ. ಹುಚ್ಚು ಬಿಡುವವರೆಗೆ ಮದುವೆ ಆಗೋಲ್ಲ' ಎಂಬಂತೆ ಹೆಣ್ಣು ನೋಡುವ ಶಾಸ್ತ್ರ ಮಾಡಿದ್ದೇ ಮಾಡಿದ್ದು. ಎಲ್ಲಿಯವರೆಗೆ ನೋಡುವುದು. ಏನು ಪ್ರಯೋಜನ. ಅದಕ್ಕೂ ಒಂದು ವಯಸ್ಸು ಉಂಟಲ್ಲ. ವಯಸಿದ್ದಾಗಲೇ ಯಾರು ವರಿಸಲಿಲ್ಲ. ಇನ್ನು ಇವಾಗ 40–45 ದಾಟಿದ ಮೇಲೆ ಯಾರು ಮೆಚ್ಚಿಯಾರು? 50ರ ಗಡಿ ದಾಟುತ್ತಿರುವವ ಹೋಗಿ ಹೇಗೆ ಹೆಣ್ಣು ಕೇಳುವುದು?



ಅಲ್ಲಿಗೆ ಮದುವೆ ಆಸೆ ಬಿಟ್ಟಂತಯೇ.

ಇದು ಅಣ್ಣನ ಕರ್ಮ ಅಥವಾ ಶಾಪ ಅಥವಾ ದುರಾದೃಷ್ಟ ಎಂದುಕೊಳ್ಳಬೇಕಾ? ಇಲ್ಲ ಇಲ್ಲ. ಅವನೊಬ್ಬನದಲ್ಲ. ಉಳಿದಿಬ್ಬರದು ಕೂಡಾ.

ಅವನಿಗೇನೇ ವಿವಾಹಬಂಧ ಕೂಡಿಬರಲಿಲ್ಲ ಎಂದಾಗ, ಉಳಿದಿಬ್ಬರು 'ನನಗೆ ಮದುವೆ ಮಾಡಿಸಿ' ಎಂದು ಲಜ್ಜೆಬಿಟ್ಟು ಹೇಗೆ ಕೇಳುವುದು.. ಅಲ್ಲಿಗೆ ಕಥೆ ಮುಗಿದಂತೆಯೆ.

ಒಬ್ಬ ಮಡದಿ ಸಾಲುವುದಿಲ್ಲವೆಂದು ಮತ್ತೊಬ್ಬ ಪ್ರೇಯಸಿಯನ್ನೂ ಇಟ್ಟುಕೊಳ್ಳುವ ಕೆಲ ರಸಿಕರು ಇರುವ ಈ ದಿನಗಳಲ್ಲಿ, ಎಲ್ಲಾ ಆಸೆಗಳನ್ನು ಕೊಂದುಕೊಂಡು ಬದುಕುವ ನತದೃಷ್ಟ ಬದುಕು ಈ ಮೂವರದು. ಆದರು ಬದುಕಲೇಬೇಕು.

ಅಪ್ಪ ಹೋಗಿ ಯಾವುದೋ ಕಾಲವಾಯಿತು. ಇವರದೇ ಕೊರಗಿನಲ್ಲಿ ಅಮ್ಮ ಹಾಸಿಗೆ ಹಿಡಿದಳು. ಅವಳನ್ನು ನೋಡಿಕೊಳ್ಳಲೂ ಸಹ ಒಂದು ಹೆಣ್ಣಿನ ದಿಕ್ಕಿಲ್ಲ. ಜೀವನಕ್ಕೆ ಬೇಕಾದ ಸಂಪಾದನೆ ಮಾಡಿಕೊಂಡು, ಮನೆಕೆಲಸವನ್ನು ಮಾಡಿಕೊಂಡು, ಅನಾರೋಗ್ಯದಿಂದ ನರಳುವ ಅಮ್ಮನನ್ನು ನೋಡಿಕೊಳ್ಳುವ ಟಾಸ್ಕು ಆ ಮೂವರದು.

ಇದು ಅವರೊಬ್ಬರ ಕಥೆ ಅಲ್ಲ. ಎಷ್ಟೋ ಜನರ ವ್ಯಥೆಯ ಕಥೆ.

ಅಲ್ಲಿ ಐವರು ಹೆಣ್ಣುಮಕ್ಕಳು. ಎಲ್ಲರೂ ಹೆಚ್ಚು ಕಡಿಮೆ ಸುಂದರಿಯರೆ. ಮೊದಲನೆಯವಳು ತನ್ನ ಸೌಂದರ್ಯಕ್ಕೆ, ಓದಿಗೆ, ಶ್ರೀಮಂತಿಕೆಗೆ ತಕ್ಕನಾದವನಲ್ಲ' ಎಂದು ಬಂದವರನ್ನೆಲ್ಲ ನಿರಾಕರಿಸುತ್ತಾ ಬಂದಳು.



ನಂತರ ಬಂದವರೆಲ್ಲ ಅವಳನ್ನು ನಿರಾಕ–ರಿಸುತ್ತಾ ಹೋದರು. ಮುಂದಿನ ದಿನಗಳಲ್ಲಿ 'ಅನ್ನ ಹಳಸಿತ್ತು, ನಾಯಿ ಹಸಿತ್ತು' ಎನ್ನುವಂತೆ. ಯಾರೊ ಒಬ್ಬ ನಾಲಾಯಕ್ ಹುಡುಗನಿಗು ಅವಳಿಗೂ ಮದುವೆ. ಆಕೆಯಿಂದ ಉಳಿದವ–ರಿಗೆಲ್ಲ ತಡವಾಯಿತು. ಅವರಿಗೂ ಅವನೋ ಇವನೊ ಯಾರೊ ಒಬ್ಬೊಬ್ಬ ಸಿಕ್ಕಿದ. ಯಾರ ಸಂಸಾರವು ನೆಟ್ಟಗಾಗಲಿಲ್ಲ ಬಿಡಿ.

ಮತ್ತೊಂದು ಕುಟುಂಬ. ಅಲ್ಲಿ ತಂಗಿಯ ಮದುವೆ ಆಗುವವರೆಗೆ ಅಣ್ಣಂದಿರು ವಿವಾಹವಾಗುವಂತಿಲ್ಲ. ಅವಳದು ಎಲ್ಲಾ ಮುಗಿಯುವವರೆಗೆ, ಅಣ್ಣಂದಿರಿಗೆ ವಯಸ್ಸಾಗಿರುತ್ತೆ. ಅವಾಗ ಹೆಣ್ಣು ಹುಡುಕಲು ಹೋದರೆ ಸಿಕ್ಕೀತೆ? ಮತ್ತದೇ ಹುಡುಕಾಟ.ಸ, ತೊಳಲಾಟ

ಹೀಗೆ ಒಬ್ಬರ ಕರ್ಮ ಮತ್ತೊಬ್ಬರನ್ನು ಸಹ ಸುತ್ತಿಬಿಟ್ಟಿತ್ತೇನೊ

'ನಿಷ್ಕ್ರಿಯ ಧೂಮಪಾನಿಗಳು' ಹತ್ತಿರದಲ್ಲಿರುವ ಬೇರೆಯವರು ಧೂಮಪಾನ ಮಾಡುವ ಹೊಗೆ ಇತರರ ಮುಗಿಗೂ ರಾಚಿ ಅವರೂ ಸಹ ಆ ಹೊಗೆಯನ್ನು ಸೇವಿಸುವಂತಾಗುವಂತೆ, ದೊಡ್ಡವರ ಕರ್ಮಕ್ಕೆ ಒಡಹುಟ್ಟಿದವರು ಪಾಲುದಾರರಾಗುತ್ತಾರೊ ಅಥವಾ ಅವರೆಲ್ಲರ ಹಣೆಬರಹವೆ ಅಷ್ಟೊ ಗೊತ್ತಿಲ್ಲ .

ಅ ಹುಡುಗಿ ಓದಿರೋದು ಬಿ.ಕಾಂ. ಆದರೆ ಅವಳಿಗೆ ಡಾಕ್ಟರ್ ಹುಡುಗಾನೇ ಬೇಕು.

ಅವಳು ಓದಿರೋದು ಪಿಯುಸಿ. ಆದರೆ ಅವಳ ಪೋಷಕರು ಅವಳಿಗೆ ನೋಡುತ್ತಿರುವ ಹುಡುಗ, ಸರ್ಕಾರಿ ನೌಕರಿಯಲ್ಲೇ ಇರಬೇಕು.


ಇವಳು ಒಬ್ಬಳೇ ಮಗಳು. ಹಾಗಾಗಿ ಒಬ್ಬನೇ ಮಗ ಇರಬೇಕು. ಅವನೂ ಸಹ ಸಿಟಿಯಲ್ಲೇ ಇರಬೇಕು. ಆದರೆ ಊರಿನಲ್ಲಿ ಆಸ್ತಿ ಇರಲೇಬೇಕು. ಹುಡುಗನಿಗೆ ಪೋಷಕರಿದ್ದರೆ ಅವರು ಊರಿನಲ್ಲಿ ಆರಾಮವಾಗಿ ಆಸ್ತಿ ನೋಡಿಕೊಂಡು, ಬೆಳೆ



ಬೆಳೆದುಕೊಂಡಿರಬಹುದು.

ಆಸೆಗಳು ಒಂದಾ.. ಎರಡಾ.. ಇದರ ಮಧ್ಯೆ ಪಾಪ ನಮ್ ಹುಡುಗರ ಪಾಡು 'ಯಾರೋ ಯಾರೋ ಗೀಚಿಹೋದ ಹಾಳು.. ಹಣೆಯಾ ಬರಹ' ಎಂಬಂತಾಗಿಬಿಟ್ಟಿದೆ.

ಲೇಖನ
ರಶ್ಮಿ ಕೆ. ವಿಶ್ವನಾಥ್
ಮೈಸೂರು



# ನಿಗದಿತ ಸಮಯದೊಳಗೆ ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಿ



■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಸಮುದಾಯದ ಅಗತ್ಯಗಳಿಗೆ ತಕ್ಕಂತೆ ಈ ಭವನ ನಿರ್ಮಾಣವಾಗಬೇಕು. ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಜನರಿಗೆ ಉಪಯುಕ್ತವಾಗುವಂತೆ ಕಟ್ಟಡ ನಿರ್ಮಿಸಬೇಕು ಎಂದು ಶಾಸಕ ಅಶೋಕ ಮನಗೂಳಿ ಹೇಳಿದರು.

ಸಿಂದಗಿ ನಗರದ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿರುವ ಶ್ರೀ ಗಣಪತಿ ದೇವಸ್ಥಾನದಲ್ಲಿ ಲೋಕೋಪಯೋಗಿ ಇಲಾಖೆಯ 2025-26ನೇ ಸಾಲಿನ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ ರೂ.25 ಲಕ್ಷ ವೆಚ್ಚದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸಮುದಾಯ ಭಾವನಗಳ ನಿರ್ಮಾಣವು ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತದೆ. ಈ ಸಮುದಾಯ ಭವನ ಸಮಾಜದ ವಿವಿಧ ಸಭೆ-ಸಮಾರಂಭಗಳಿಗೆ ಉಪಯೋಗವಾಗಲಿ. ನಿಗದಿತ ಸಮಯದೊಳಗೆ ಗುಣಮಟ್ಟದ ಕಾಮಗಾರಿ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗುವುದು. ರೂ.25 ಲಕ್ಷ ವೆಚ್ಚದ ಈ ಸಮುದಾಯ ಭವನ ನಿರ್ಮಾಣದಿಂದ ಸಾರ್ವಜನಿಕರಿಗೆ ಹಾಗೂ ವಿವಿಧ ಕಾರ್ಯಕ್ರಮಗಳಿಗೆ ಅನುಕೂಲವಾಗಲಿದೆ.

ಇದೇ ಸಂದರ್ಭದಲ್ಲಿ ಮಹಾದೇವಪ್ಪ ಮುಂಡೇವಾಡಗಿ, ಅಶೋಕ ವಾರದ, ಉಮೇಶ ಜೋಗುರ, ಮುತ್ತು ಮುಂಡೇವಾಡಗಿ, ರಾಜಶೇಖರ ಶಹಾಪುರ, ಬಸಯ್ಯ ಹಿರೇಮಠ, ಶ್ರೀಶೈಲ ನಂದಿಕೋಲ, ಅಶೋಕ ತೆಗ್ಗೆಳ್ಳಿ, ರವಿ ನಾವಿ ಸೇರಿದಂತೆ ಸ್ಥಳೀಯ ಮುಖಂಡರು, ಎಪಿಎಂಸಿ ಮತ್ತು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು, ಎಪಿಎಂಸಿ ಗಣ್ಯ ವ್ಯಾಪಾರಸ್ಥರು, ಎಪಿಎಂಸಿ ಅಧ್ಯಕ್ಷರು, ಉಪಾಧ್ಯಕ್ಷರು, ನಾಮ ನಿರ್ದೇಶನ ಸದಸ್ಯರು, ಹಿರಿಯ ಮುಖಂಡರು, ಕಾರ್ಯಕರ್ತರು, ಸೇರಿದಂತೆ ಯುವ ಮಿತ್ರರು, ಸ್ಥಳೀಯರು ಉಪಸ್ಥಿತರಿದ್ದರು.

# ಪಡಗಾನೂರದಲ್ಲಿ ದ್ಯಾಮವ್ವದೇವಿ ಜಾತ್ರೆ ಸಂಪನ್ನ



■ ಉದಯರಶ್ಮಿ ದಿನಪತ್ರಿಕೆ

ದೇವರಹಿಪ್ಪರಗಿ: ತಾಲ್ಲೂಕಿನ ಪಡಗಾನೂರಲ್ಲಿ ಗ್ರಾಮದೇವಿ ದ್ಯಾಮವ್ವದೇವಿ ಜಾತ್ರೆ ಭಕ್ತಿಭಾವದೊಂದಿಗೆ ವಿಜೃಂಭಣೆಯಿಂದ ಜರುಗಿ ಸಂಪನ್ನಗೊಂಡಿತು. ಗ್ರಾಮದ ಪರಂಪರೆಯಂತೆ ಬುಧವಾರ ಬಸನಗೌಡ ರಾಮನಗೌಡ ಪೊಲೀಸ್ ಪಾಟೀಲ ಇವರ ನೇತೃತ್ವದಲ್ಲಿ ದೇವಿ ಅರ್ಚಕ ಶಿವಶಂಕರ ಪತ್ತಾರ ಕುಟುಂಬದವರು ಸಾಂಪ್ರದಾಯಿಕ ಉಡಿತುಂಬುವ ವಿಧಿವಿಧಾನ ನೆರವೇರಿಸಿದರು. ಐದು ದಿವಸಗಳ ಕಾಲ ಗ್ರಾಮದ ಚಾವಡಿಯಲ್ಲಿ ವಾಸ್ತವ್ಯ ಮಾಡಿದ ಗ್ರಾಮದೇವಿಯನ್ನು ಶಾಸ್ತ್ರೋಕ್ತ ರೀತಿಯಿಂದ ಪೂಜಿಸಲಾಯಿತು. ನಂತರ ಲಗಮಾದೇವಿ ಮತ್ತು ಕೆಂಚರಾಯ ದೇವರುಗಳನ್ನು ಬಂಡಿಯಲ್ಲಿ ಪ್ರತಿಷ್ಠಾಪಿಸಿ ಶಹನಾಯಿ, ಹಲಗೆ, ಡೊಳ್ಳು ವಾದ್ಯಗಳ ಸಹಿತ ವಿವಿಧ ಕಲಾ ತಂಡಗಳ ಕುಣಿತ ಪ್ರದರ್ಶನದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

ಗುರುನಾಥ ಮುರುಡಿ, ಆಕಾಶ ಕಬ್ಬಿನ, ಸಾಗರ ಭೋವಿ, ರಾಜು ಪಾಟೀಲ, ಸಾಯಬಣ್ಣ ಕೋಟ-ರಗಸ್ತಿ, ಮಹೇಶ ಪಾಟೀಲ, ಆನಂದ ಯಳಮೇಲಿ, ರಾಜಶೇಖರ ಬೆನಕನಹಳ್ಳಿ, ಶಿವನಗೌಡ ಪಾಟೀಲ, ಬಾಲಶೇಖರ ಕಬ್ಬಿನ, ಶಂಕರಗೌಡ ಪಾಟೀಲ, ಸುಭಾಸ ಹೊಸಟ್ಟಿ, ಶ್ರೀಶೈಲ ಪತ್ತಾರ, ಶ್ರೀಶೈಲ ಟಕ್ಕಳಕಿಮಠ, ಷಣ್ಮುಖ ಹಡಪದ, ಮಹಾಂತೇಶ ವಡ್ಡೋಡಗಿ ಜಾತ್ರೆಯ ನೇತೃತ್ವ ವಹಿಸಿದ್ದರು.

# ಸ್ವಚ್ಛತೆ ಮತ್ತು ಶುದ್ಧತೆ ನಮ್ಮೆಲ್ಲರ ಆದ್ಯ ಕರ್ತವ್ಯ : ಡಾ. ಪ್ರಭುಸಾರಂಗದೇವ ಶ್ರೀ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಸ್ವಚ್ಛತೆ ಮತ್ತು ಶುದ್ಧತೆ ನಮ್ಮೆಲ್ಲರ ಆದ್ಯ ಕರ್ತವ್ಯ. ಶುದ್ಧ ಕುಡಿಯುವ ನೀರಿನ ಘಟಕವನ್ನು ಮಾಜಿ ಸಚಿವ ದಿ.ಎಮ್.ಸಿ.ಮನಗೂಳಿ ಪ್ರತಿಷ್ಠಾನದಿಂದ ಸ್ಥಾಪಿಸುವ ಮೂಲಕ ಮನಗೂಳಿ ಕುಟುಂಬ ಸಾಮಾಜಿಕ ಸೇವೆ ಮಾಡುತ್ತಿರುವುದು ಶ್ಲಾಘನೀಯ ಎಂದು ಸಾರಂಗಮಠದ ಪೀಠಾಧಿಪತಿ ಡಾ.ಪ್ರಭುಸಾರಂಗದೇವ ಶಿವಾಚಾರ್ಯರು ಹೇಳಿದರು.. ನಗರದ ಪೂಜ್ಯಶ್ರೀ ಚನ್ನವೀರ ಸ್ವಾಮೀಜಿ ಬಸ್ ನಿಲ್ದಾಣದಲ್ಲಿ ದಿ.ಎಂ.ಸಿ.ಮನಗೂಳಿ ಪ್ರತಿಷ್ಠಾನದಿಂದ ಪ್ರಯಾಣಿಕರ ಹಿತಕ್ಕಾಗಿ ಸ್ಥಾಪಿಸಿರುವ ಶುದ್ಧ ಕುಡಿಯುವ ನೀರಿನ ಘಟಕಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಯಾಣಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸುರಕ್ಷಿತ ಹಾಗೂ ಕಲುಷಿತ-ಮುಕ್ತ ನೀರು ಒದಗಿಸುವ ಉದ್ದೇಶದಿಂದ ಸಿಂದಗಿ ಬಸ್ ನಿಲ್ದಾಣದಲ್ಲಿ ಹೊಸ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆಗೊಂಡಿರುವುದು ಸಂತಸ ತಂದಿದೆ. ಈ ಘಟಕ ಪ್ರಯಾಣಿಕರ ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಈ ವೇಳೆ ಶಾಸಕ ಅಶೋಕ ಮನಗೂಳಿ ಮಾತನಾಡಿ, ನಮ್ಮ ತಂದೆಯವರಾದ ದಿವಂಗತ ಎಂ.ಸಿ.ಮನಗೂಳಿ ಅವರ ಹೆಸರಿನ ಮೇಲೆ ದಿ.ಎಂ.ಸಿ.ಮನಗೂಳಿ ಪ್ರತಿಷ್ಠಾನವನ್ನು ಸ್ಥಾಪಿಸಿ ಅವರ ಕನಸಿನಂತೆ ಅನೇಕ ಸಾಮಾಜಿಕ ಸೇವೆಗಳನ್ನು ಪ್ರತಿಷ್ಠಾನದ ಮೂಲಕ ಮಾಡುತ್ತಾ ಬಂದಿದೆ. ಸಿಂದಗಿ ಮತಕ್ಷೇತ್ರದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮೊದಲ ಹಂತದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಪ್ರಾರಂಭಿಸಲಾಗಿದೆ. ಮುಂದಿನ ದಿನಮಾನಗಳಲ್ಲಿ ಉಳಿದ ಶಾಲೆಗಳಿಗೆ ಶುದ್ಧ ಕುಡಿಯುವ ನೀರಿನ ಘಟಕವನ್ನು ಆರಂಭಿಸಲಾಗುವುದು.



ಅದಲ್ಲದೇ ಪ್ರತಿಷ್ಠಾನದಿಂದ ಆರೋಗ್ಯ, ಶಿಕ್ಷಣ ಸೇರಿದಂತೆ ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದ ಅವರು ಪ್ರಯಾಣಿಕರ ಆರೋಗ್ಯದ ಹಿತ ದೃಷ್ಟಿಯಿಂದ ಬಸ್ ನಿಲ್ದಾಣದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಪ್ರಾರಂಭಿಸಲಾಗಿದೆ. ಇದರ ಸದುಪಯೋಗವನ್ನು ಪ್ರಯಾಣಿಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಪಡೆದುಕೊಳ್ಳಬೇಕು ಎಂದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಅಶೋಕ್ ವಾರದ, ಆಲಮೇಲ ಗ್ಯಾರಂಟಿ ಸಮಿತಿ ಅಧ್ಯಕ್ಷ ಅಶೋಕ ಕೊಳಾರಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ್ ಪೂಜಾರಿ, ಸಂದೀಪ ಚೌರ, ಶಾಂತು ರಾಣಾಗೋಳ, ಸಾಯಬಣ್ಣ ಪುರಾದಾಳ, ಎಂ.ಎ.ಖತೀಬ, ಸುನಂದಾ ಯಂಪುರೆ, ಜಯಶ್ರೀ ಹದನೂರ, ಶಶಿಕಲಾ ಅಂಗಡಿ ಸೇರಿದಂತೆ ಇತರರು ಇದ್ದರು.

# ಸಾಲೋಟಗಿಯಲ್ಲಿ ಮಳೆ ಗಾಳಿಗೆ ಬಾಳೆ ತೋಟ ನಾಶ

■ ಉದಯರಶ್ಮಿ ದಿನಪತ್ರಿಕೆ

ಇಂಡಿ: ತಾಲೂಕಿನಲ್ಲಿ ಶನಿವಾರ ಸಂಜೆ 6 ಗಂಟೆಗೆ ಮತ್ತು ರಾತ್ರಿ ಬೀಸಿದ ಗಾಳಿ ಮಳೆಗೆ ಬಾಳೆಗಿಡ ನಾಶವಾಗಿವೆ. ಸಾಲೋಟಗಿ ಗ್ರಾಮದ ರೈತ ಧರ್ಮರಾಯ ಚನ್ನಪ್ಪ ನರಳೆ ಇವರಿಗೆ ಸೇರಿದ 2055 ಬಾಳೆ ಗಿಡಗಳು ಮತ್ತು ಸಿದ್ದು ದೇವೇಂದ್ರ ನರಳೆ ಇವರಿಗೆ ಸೇರಿದ 1950 ಬಾಳೆ ಗಿಡಗಳು ಸಂಪೂರ್ಣ ನೆಲಸಮವಾಗಿವೆ. ಬಾಳೆ ಗಿಡಗಳು ಕೇವಲ 15 ದಿನದಲ್ಲಿ ಮಾರಾಟಕ್ಕೆ ಹೋಗುವ ಸ್ಥಿತಿಯಲ್ಲಿ ಇದ್ದವು. ಘಟನಾ ಸ್ಥಳಕ್ಕೆ ಜೆಡಿ ಎಸ್ ಧುರೀಣರಾದ ಬಿ.ಡಿ.ಪಾಟೀಲ ಭೇಟಿ ನೀಡಿದ್ದು ಪ್ರಕೃತಿ ವಿಕೋಪ ಪರಿಹಾರದ ಅಡಿಯಲ್ಲಿ ರೈತರಿಗೆ ಪರಿಹಾರ ನೀಡಲು ಆಗ್ರಹಿಸಿದ್ದಾರೆ.



# ಲಿಂಗಾಯತರಿಗೆ ಲಿಂಗಾಯತರೇ ಶತ್ರುಗಳು!




■ ಉದಯರಶ್ಮಿ ದಿನಪತ್ರಿಕೆ

**ಅಭಿಮತ**

ಇತ್ತೀಚೆಗೆ ಲಿಂಗಾಯತ ಧರ್ಮದ ಮಾನ್ಯತೆ ಮತ್ತು ಅಲ್ಪ ಸಂಖ್ಯಾತ ಸ್ಥಾನಮಾನದ ಬೇಡಿಕೆ ಸಂಪೂರ್ಣ ನೆಲ ಕಚ್ಚಿದೆ.

2018 ರಲ್ಲಿ ಸುನಾಮಿ ತರಹ ಹುಟ್ಟಿಕೊಂಡ ಲಿಂಗಾಯತ ಪ್ರತ್ಯೇಕ ಧರ್ಮ ಮಾನ್ಯತೆ ಚಳುವಳಿ ಸಂವಿಧಾನಾತ್ಮಕ ನ್ಯಾಯ ಸಮ್ಮತ ಕಾನೂನು ಸಮ್ಮತ ಇದ್ದರೂ ಸಹಿತ ಹಲವು ಕಾರಣಗಳಿಂದ ನೆಲ ಕಚ್ಚಿದೆ. ಈ ಚಳುವಳಿಯ ಮೂಲ ಉದ್ದೇಶದಿಂದ ನಾವು ಅಂ-ದ್ರೆ ಬಸವ ಪ್ರಣೀತಾ ಸಮಾಜ ಲಿಂಗಾಯತ ಸಮಾಜ ಸಂಪೂರ್ಣ ತನ್ನ ಬೇಡಿಕೆ ಈಡೇರಿಸುವ ಕನಸು ನುಚ್ಚು ನೂರಾಗುತ್ತಿದೆ.

ಇದು ಒಂದು ರಾಜಕೀಯ ಪಕ್ಷಗಳ ಹೋರಾಟವೇ?

ಹೌದು ಲಿಂಗಾಯತ ಧರ್ಮದವರ ಸಂಶೋಧಕರು ಲಿಂಗಾಯತ ಧರ್ಮವನ್ನು ಹಿಂದೂ ಧರ್ಮದ ಒಂದು ಭಾಗ ಎಂದು ಬಿಂಬಿಸಲು ಹೊರಟರು. ವೀಣಾ ಬನ್ನಂಜೆ, ಸದಾಶಿವ ಸ್ವಾಮೀಜಿ, ಕನ್ನೇರಿ ಸ್ವಾಮಿಯ ಸಹಾಯದಿಂದ ಲಿಂಗಾಯತರನ್ನು ದಿಕ್ಕು ತಪ್ಪಿಸಿ ತಮ್ಮ ಮೂಲ ಹೋರಾಟದಿಂದ ಹಿಂದೆ ಸರಿಯುವಂತೆ ಮಾಡಲಾಯಿತು.

ಲಿಂಗಾಯತ ಧರ್ಮದ ವಿರೋಧಿ ಲೇಖನಗಳ ಪ್ರಕಟ

ಲಿಂಗಾಯತ ಧರ್ಮದ ತತ್ವ ಸಿದ್ಧಾಂತಗಳನ್ನು ವಿರೂಪಗೊಳಿಸುವ ಹುನ್ನಾರ ಅಥವಾ ಕೆಲ ಜಾತಿವಾದಿಗಳಿಂದ ಪ್ರಕ್ಷಿಪ್ತ ವಚನಗಳ ಮೂಲಕ ತಮಗೆ ಬೇಕಾದ ಹಾಗೆ ಲೇಖನ ಬರೆಯಹತ್ತಿದರು. ಇದು ಎಲ್ಲಿಯವರೆಗೆ ಹೋಯಿತೆಂದರೆ ಲಿಂಗಾಯತ ಚಳುವಳಿಯ ನಾಯಕರ ವ್ಯಕ್ತಿಗತ ಚರಿತ್ರೆ ಬಗ್ಗೆ ಟೀಕೆ ಟಿಪ್ಪಣಿಗಳು ಬರಹತ್ತಿದವು.



ಮತಗಳನ್ನು ಸೆಳೆಯಲು ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರು. ಅಂದಿನ ಬಹುತೇಕ ಶಾಸಕರನ್ನು ಮಂತ್ರಿಗಳನ್ನು ಈ ಲಿಂಗಾಯತ ಧರ್ಮದ ಮಾನ್ಯತೆ ಚಳುವಳಿಗೆ ಉದಾರವಾಗಿ ಬಿಟ್ಟರು.

ಆವಾಗಲೇ ಹುಟ್ಟಿಕೊಂಡದ್ದು ಬಸವ ಸೇನೆ, ಜಾಗತಿಕ ಲಿಂಗಾಯತ ಮಹಾಸಭೆ

ನಿರೀಕ್ಷೆಗೆ ತಕ್ಕಂತೆ ಕಾರ್ಯ ನಿರ್ವಹಿಸಲು ಆಗದೆ ಬಸವ ಸೇನೆ ಹೆಸರಿಲ್ಲದೆ ಮಾಯವಾಯಿತು.

ಇನ್ನು ಜಾಗತಿಕ ಲಿಂಗಾಯತ ಮಹಾಸಭೆ ಲಿಂಗಾಯತ ಧರ್ಮದ ಅರಿವು ತಕ್ಕ ಮಟ್ಟಿಗೆ ಮೂಡಿಸಿದೆ ಹೊರತು ಮೂಲ ಉದ್ದೇಶಗಳನ್ನು ಸಾಧಿಸಲು ಸಾಧ್ಯವಾಗಿಲ್ಲ.

ಒಬ್ಬರೇ ವಕ್ತಾರರು ಅಧಿಕಾರಿಗಳು ಭಾಷಣ, ಟಿವಿ, ಚರ್ಚೆ, ಪುಸ್ತಕ ರಚನೆಗೆ ಮುಂದಾದರು. ಜಾಗತಿಕ ಲಿಂಗಾಯತ ಮಹಾಸಭೆ ಕಾಂಗ್ರೆಸ್ ಪಕ್ಷದ ಮುಖವಾಣಿ ಎಂಬ ಗುಲ್ಲು ಎದ್ದಿತು. ಹೀಗಾಗಿ ಬಿಜೆಪಿ ಲಿಂಗಾಯತ ಸಮುದಾಯದ ಮುಖಂಡರು ಲಿಂಗಾಯತ ಮತಗಳನ್ನು ಸೆಳೆಯಲು ಉಳಿಸಿಕೊಳ್ಳಲು

ಕೆಲ ಲಿಂಗಾಯತ ಕಾವಿಧಾರಿಗಳಿಂದ ಹಲವು ರೀತಿಯ ಆಕ್ರಮಣ ಮಾಡಿಸಹತ್ತಿದರು.

ಲಿಂಗಾಯತ ತತ್ವ ಸಿದ್ಧಾಂತಗಳ ಮೇಲೆ ನಿರಂತರ ಪ್ರಹಾರ

ವಚನ ದರ್ಶನ ಎಂಬ ಕೆಳ ಪ್ರಕ್ಷಿಪ್ತ ವಚನಗಳ ಆಧಾರದ ಮೇಲೆ ಸಂಘ ಪರಿವಾರದ ಸದಸ್ಯರು, ಸ್ವಾಮಿಗಳು, ಕೆಲ ಬಲಪಂಥೀಯ ಸ್ವಾಮಿಗಳು,

ಜನಮೇಜಯ ಉಮರ್ಜಿ ಒಬ್ಬ ವೈದಿಕ ವ್ಯವಸ್ಥೆಯ ವ್ಯಕ್ತಿ ಲಿಂಗಾಯತ ಧರ್ಮದ ಪಂಚಾಚಾರ ಅಷ್ಟಾವರಣ ಷಟ್ ಸ್ಥಳ ಮುಂತಾದವುಗಳ ಬಗ್ಗೆ ತಳ ಬಿಡುವಿಲ್ಲದೆ ಟೀಕಿಸುವ ವಿಮರ್ಶಿಸುವ ಕಾರ್ಯ ಮಾಡುತ್ತಿದ್ದಾರೆ. ಕರ್ನಾಟಕದ ಒಂದು ಪತ್ರಿಕೆ ಲಿಂಗಾಯತ ಧರ್ಮದ ವಿರೋಧಿ ಲೇಖನಗಳನ್ನು ನಿರಂತರ ಪ್ರಕಟ ಮಾಡುತ್ತಿದ್ದು ವಿಶ್ವೇಶ್ವರ ಭಟ್

ಇಂತಹವರನ್ನು ಮತ್ತು ನಾಡಿನ ಹಿರಿಯ ಸಂಶೋಧಕ ಗೋರುಚ ಅವರ ಜೊತೆಗೆ ಡಾ ವೀರಣ್ಣ ರಾಜೂರವಂತವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

**ನಿಷ್ಕ್ರಿಯಗೊಂಡ ಮಠಗಳು**

ನಿಷ್ಕ್ರಿಯಗೊಂಡ ಅಥವಾ ಬಸವತತ್ವದಿಂದ ವಿಮುಖಗೊಂಡ ಮಠಗಳು ಎಂದರೆ, 12ನೇ ಶತಮಾನದಲ್ಲಿ ಜಗದ್ಗುರು ಬಸವಣ್ಣನವರು ಮತ್ತು ಶರಣರು ಪ್ರತಿಪಾದಿಸಿದ ಪ್ರಗತಿಪರ, ಜಾತಿರಹಿತ ಮತ್ತು ಅವೈದಿಕ ತತ್ವಗಳನ್ನು ಮರೆತು, ಕೇವಲ ಸಾಂಪ್ರದಾಯಿಕ ಆಚರಣೆಗಳಿಗೆ ಸೀಮಿತವಾಗಿರುವ ಮಠಗಳನ್ನು ಸೂಚಿಸುತ್ತದೆ. ಐತಿಹಾಸಿಕವಾಗಿ ಬಸವಣ್ಣನವರು ಯಾವುದೇ ನಿರ್ದಿಷ್ಟ "ಸ್ಥಾವರ" ಮಠದ ಪೀಠಾಧಿಪತಿಯಾಗಿರಲಿಲ್ಲ. ಅವರು ಸ್ಥಾಪಿಸಿದ್ದು ಜಗತ್ತಿನ ಮೊದಲ ಸಂಸತ್ತು ಎನಿಸಿದ ಅನುಭವ ಮಂಟಪ ಎಂಬ ವೈಚಾರಿಕ ಕೇಂದ್ರವನ್ನು ಮಾತ್ರ. ಆದರೆ, ಕಾಲಕ್ರಮೇಣ ಬಸವತತ್ವದ ಹೆಸರಿನಲ್ಲಿ ಹುಟ್ಟಿಕೊಂಡ ಅನೇಕ ಲಿಂಗಾಯತ ಮಠಗಳು ಇಂದು ತಮ್ಮ ಮೂಲ ಆಶಯದಿಂದ ದೂರ ಸರಿದು ನಿಷ್ಕ್ರಿಯಗೊಂಡಿವೆ ಅಥವಾ ವ್ಯವಸ್ಥೆಯ ಭಾಗವಾಗಿ ಬದಲಾಗಿವೆ ಎಂಬ ವ್ಯಾಪಕ ಚರ್ಚೆ ಮತ್ತು ವಿಮರ್ಶೆ ಸಮಾಜದಲ್ಲಿದೆ. ಬಸವ ಪರ ಮಠಗಳು ನಿಷ್ಕ್ರಿಯಗೊಳ್ಳಲು ಅಥವಾ ತತ್ವಚ್ಯುತಿ ಹೊಂದಲು ಪ್ರಮುಖ ಕಾರಣಗಳು ಮತ್ತು ಪ್ರಸ್ತುತ ಸ್ಥಿತಿ ಈ ಕೆಳಗಿನಂತಿದೆ

**1. ವೈದಿಕೀಕರಣ ಮತ್ತು ಸ್ಥಾವರ ಸಂಸ್ಕೃತಿಬಸವತತ್ವಕ್ಕೆ ವಿಮುಖ**

ಬಸವಣ್ಣನವರು "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂದು ಮೂರ್ತಿ ಪೂಜೆ, ಗುಡಿ ಸಂಸ್ಕೃತಿಯನ್ನು ವಿರೋಧಿಸಿದ್ದರು. ಆದರೆ ಇಂದಿನ ಬಹುತೇಕ ಮಠಗಳು ಬಸವಪ್ರಜ್ಞೆಯನ್ನು ಕೇವಲ ಆಚರಣೆಗೆ ಸೀಮಿತಗೊಳಿಸಿ, ವೈದಿಕ ಪರಂಪರೆಯ ಕರ್ಮಕಾಂಡಗಳನ್ನು ಅಳವಡಿಸಿಕೊಂಡು ತತ್ವ ನಿಷ್ಠೆಯಲ್ಲಿ ನಿಷ್ಕ್ರಿಯಗೊಂಡಿವೆ.

**2.ಮಠಗಳ ವೀರಶೈವೀಕರಣ**

ಮೂಲ ಲಿಂಗಾಯತ ಮಠಗಳು ಕ್ರಮೇಣ ಸನಾತನ ಶೈವ ಅಥವಾ ವೀರಶೈವ ಮಠಗಳಾಗಿ ಪರಿವರ್ತನೆಗೊಂಡು ಬಸವಣ್ಣನವರ ಇತಿಹಾಸ ಮತ್ತು ವಚನ ಕ್ರಾಂತಿಯನ್ನು ಕಡೆಗಣಿಸಿರುವುದು ಸಮಾಜದ ಪ್ರಗತಿಪರ ಚಿಂತಕರ ಟೀಕೆಗೆ ಕಾರಣವಾಗಿದೆ.

3. ಉತ್ತರಾಧಿಕಾರಿಗಳ ಕೊರತೆ ಮತ್ತು ಆಡಳಿತ ಜಡತ್ವಮುಚ್ಚಿಹೋಗುತ್ತಿರುವ ಸಣ್ಣ ಮಠಗಳು

ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಗ್ರಾಮೀಣ ಪ್ರದೇಶಗಳಲ್ಲಿದ್ದ ನೂರಾರು ಸಣ್ಣ ವಿರಕ್ತ ಮಠಗಳು ಸರಿಯಾದ ಪೀಠಾಧಿಪತಿಗಳಿಲ್ಲದೆ, ಉತ್ತರಾಧಿಕಾರಿಗಳ ಕೊರತೆಯಿಂದಾಗಿ ಭೌತಿಕವಾಗಿ ನಿಷ್ಕ್ರಿಯಗೊಂಡಿವೆ (ಬೀಗ ಹಾಕಲ್ಪಟ್ಟಿವೆ).ಆಸ್ತಿ ಪಾಸ್ತಿ ವಿವಾದ: ಕೆಲವು ಮಠಗಳು ಕೇವಲ ಭೂಮಿ, ಆಸ್ತಿ ಮತ್ತು ಅಧಿಕಾರದ ಕೇಂದ್ರಗಳಾಗಿ ಬದಲಾಗಿ ಧಾರ್ಮಿಕ ಮತ್ತು ಸಾಮಾಜಿಕ ದಾಸೋಹ ಕಾರ್ಯಗಳನ್ನು ಸಂಪೂರ್ಣವಾಗಿ ನಿಲ್ಲಿಸಿವೆ

**4. ಸಾಮಾಜಿಕ ಜವಾಬ್ದಾರಿಯಿಂದ ದೂರ ಸರಿದಿರುವುದು**

ಶರಣ ಚಳುವಳಿಯ ಮುಖ್ಯ ಉದ್ದೇಶ ಜಾತಿ ಪದ್ಧತಿಯ ನಿರ್ಮೂಲನೆಯಾಗಿತ್ತು. ಆದ-'ರೆ ಪ್ರಸ್ತುತ ಅನೇಕ ದೊಡ್ಡ ಮಠಗಳು ತಮ್ಮದೇ ಆದ ಜಾತಿಯ ಹಿತರಕ್ಷಣೆ ಮತ್ತು ರಾಜಕೀಯ ಲಾಭಕ್ಕಾಗಿ ಸೀಮಿತವಾಗಿ, ಸಮಾಜದ ಶೋಷಿತ ವರ್ಗಗಳ ಪರವಾಗಿ ಧ್ವನಿ ಎತ್ತುವಲ್ಲಿ ಸಂಪೂರ್ಣ ನಿಷ್ಕ್ರಿಯವಾಗಿವೆ. ಇಂದಿನ ಪ್ರಸ್ತುತತೆ ಮತ್ತು ಪುನಶ್ಚೇತನದ ಅಗತ್ಯಪ್ರಸ್ತುತ ಸಮಾಜದಲ್ಲಿ ಇಂತಹ ನಿಷ್ಕ್ರಿಯತೆ ಅಥವಾ ಜಡತ್ವವನ್ನು ಹೋಗಲಾಡಿಸಲು ವಿರಕ್ತ ಮಠಗಳು ಒಟ್ಟಾಗಿ ಬಸವಕಲ್ಯಾಣದ ಹೊಸ ಅನುಭವ ಮಂಟಪದ ನಿರ್ವಹಣೆಯನ್ನು ವಹಿಸಿಕೊಳ್ಳಬೇಕು ಮತ್ತು ವಚನ ಸಾಹಿತ್ಯದ ನಿಜವಾದ ಪ್ರಚಾರಕ್ಕೆ ಮುಂದಾಗಬೇಕು ಎಂಬ ಆಂದೋಲನಗಳು ನಡೆಯುತ್ತಿವೆ.

**ಮಠಗಳಲ್ಲಿ ನಡೆಯುವ ಅವಾಂತರ**


ಇತ್ತೀಚೆಗೆ ಧಾರವಾಡದ ಮುರುಘಾ ಮಠದಲ್ಲಿ ದ್ಯಾಮವ್ವನ ದುರ್ಗವ್ವನ ಜಾತ್ರೆ ಮಾಡಿಸಿ ಅದರ ಸಾನಿಧ್ಯ ವಹಿಸಿದಾಗ ಯಾರೂ ತುಟಿ ಬಿಚ್ಚಲಿಲ್ಲ.

ನಾಡಿನ ಅನೇಕ ಮಠಗಳು ಲೈಂಗಿಕ ಹಗರಣಗಳು ಮತ್ತು ಪೋಕ್ಸೋ ಪ್ರಕರಣಗಳಲ್ಲಿ ಶಿಕ್ಷೆ ಅನುಭವಿಸಿದರೆ ಇನ್ನೂ ಅನೇಕ ಮಠಗಳು ಸ್ವಾಮಿಗಳು ಭಕ್ತರಿಂದ ಹಲ್ಲೆಗೆ ಒಳಗಾಗಿದ್ದಾರೆ. ಒಳಪಂಗಡಗಳ ಮಠಗಳು ಲಿಂಗಾಯತ ಮತ್ತು ಅವುಗಳ ಉಪ ಜಾತಿ ಬರೆಸಲು ಹೇಳದೆ ಹಿಂದೂ ಹೇಳಿ ಲಿಂಗಾಯತ ಸಾದರ ಪಂಚಮಸಾಲಿ ಬಣಜಿಗ ನೊಣಬ ಇತ್ಯಾದಿಯಾಗಿ ಆದೇಶ ಹೊರಡಿಸಿದರು.

**ಮಠಗಳು ವಾಣಿಜ್ಯ ಮಳಿಗೆಗಳಾಗಿವೆ.**

ಒಳ ಮೀಸಲಾತಿ ಬೇಡಿಕೆ ಲಿಂಗಾಯತ ಧರ್ಮದ ಮಾನ್ಯತೆ ಹೋರಾಟಕ್ಕೆ ಮುಳುವಾಯಿತು.

ಕನ್ನೇರಿ ಸ್ವಾಮಿಗಳು ಅತ್ಯಂತ ಅಶ್ಲೀಲ ಪದಗಳನ್ನು ಬಳಸಿ ಮಾತನಾಡಿದರೂ ಯಾರು ಅವರ ವಿರುದ್ಧ ನಿರೀಕ್ಷೆಯ ಮಟ್ಟಕ್ಕೆ ಹೋರಾಡಲಿಲ್ಲ .



ಪ್ರಚಾರಕ್ಕಾಗಿ ಕೆಲವರು ಬಸವ ಶೈವ ಹಿಂದೂ ಧರ್ಮ ಎಂಬ ಪುಸ್ತಕ ಶರಣರ ಶಕ್ತಿ ಮತ್ತು ಅಕ್ಕ ಮಹಾದೇವಿ ಎಂಬ ಚಲನಚಿತ್ರಗಳು ಜನರಿಗೆ ತಪ್ಪು ಸಂದೇಶ ಕೊಡುವ ಕೆಲಸ ನಿರಂತರ ಮಾಡುತ್ತಿದ್ದಾರೆ.

ಬಸವಾದಿ ಶರಣರ ಹಿಂದೂ ಸಮಾವೇಶ ಎಂಬ ಅರ್ಥ ರಹಿತ ಕಾರ್ಯಕ್ರಮಗಳಲ್ಲಿ ಕನ್ನೇರಿ ಸ್ವಾಮಿಯ ನೇತೃತ್ವದಲ್ಲಿ ಪಂಚಪೀಠ ಸ್ವಾಮಿಗಳು ಮತ್ತು ಸಂಘ ಪರಿವಾರದ ಸದಸ್ಯರ ಸಹಾಯದೊಂದಿಗೆ ಕರ್ನಾಟಕದಲ್ಲಿ 2028 ಬಿಜೆಪಿಯನ್ನು ಶತಾಯ ಗತಾಯ ಆಡಳಿತ ಅಧಿಕಾರಕ್ಕೆ ತರಲು ಯೋಜನೆ ರೂಪಿಸಲಾಗಿದೆ. ಸಂಘ ಪರಿವಾರದ ಸದಸ್ಯರ ಮತ್ತು ಬಿಜೆಪಿ ನಾಯಕರ ಕಟ್ಟರ್ ಹಿಂದುತ್ವಕ್ಕಿಂತ ಕಾಂಗ್ರೆಸ್ ಪಕ್ಷದ ನಾಯಕರ ಮೃದು ಹಿಂದುತ್ವ ಧೋರಣೆ ಹೆಚ್ಚು ಅಪಾಯಕಾರಿಯಾಗಿದೆ.

ಬಸವ ಕಲ್ಯಾಣ ಸಂಘ ಪರಿವಾರದ ಕ್ಷೇತ್ರವಾಗುತ್ತಿದೆ. 1000 ಕೋಟಿ ಖರ್ಚು ಮಾಡಿ ಕಟ್ಟುವ ಅನುಭವ ಮಂಟಪವು ಮುಂದೊಂದು ದಿನ ದೇಶದ ಎರಡನೆಯ ನಾಗಪುರ ಆಗುವುದರಲ್ಲಿ ಎರಡು ಮಾತಿಲ್ಲ.

ಇದಕ್ಕೆ ಮೊನ್ನೆ ಬಸವಣ್ಣನವರ 108 ಅಡಿ ಪುತ್ಥಳಿಯ ಎದುರಿಗೆ ಲಿಂಗಾಯತ ಬಿಜೆಪಿ ನಾಯಕರು ಮತ್ತು ಸಂಘ ಪರಿವಾರದ ಸದಸ್ಯರು ತಮ್ಮ ಆರ್ ಎಸ್ ಎಸ್ ಗೀತೆ ಹಾಡಿ

ಬಸವಣ್ಣನವರ ಕೊರಳಿಗೆ ಜನಿವಾರ ಹಾಕುವ ತಯಾರಿಯಲ್ಲಿದೆ. ಏಕೆ ಜಾಗತಿಕ ಲಿಂಗಾಯತ ಮಹಾಸಭೆ ಮಠಾಧೀಶರ ಒಕ್ಕೂಟ ಮೌನ ಡಾ ಬಸವಲಿಂಗ ಸ್ವಾಮೀಜಿಯವರು ಅಷ್ಟೊಂದು ಅಸಹಾಯಕರೇ?

ಡಾ ಗಂಗಾಮಾತಾಜಿ ಅಲ್ಲಿನ ಶ್ರೀ ಸಿದ್ಧರಾಮ ಸ್ವಾಮೀಜಿ ಇದಕ್ಕೆ ಏನು ಉತ್ತರ ಕೊಡುತ್ತಾರೆ.

ಲಿಂಗಾಯತ ಧರ್ಮದ ಮಾನ್ಯತೆ ವಿರೋಧಿಸುವ ರಂಭಾಪುರಿ ಶ್ರೀಗಳ ಮಠ ನಿರ್ಮಾಣಕ್ಕೆ ನಮ್ಮ ನಾಯಕರು ವಿಸ್ತೀರ್ಣ ನಿವೇಶನ ಕೊಟ್ಟು ಗುದ್ದಲಿ ಪೂಜೆಗೆ ನಮ್ಮ ಲಿಂಗಾಯತ ನಾಯಕರು ಹೋಗಿದ್ದರು.

ಅತ್ತ ಭಾಲ್ಕಿ ಸ್ವಾಮೀಜಿ ವಚನ ವಿಶ್ವ ವಿದ್ಯಾಲಯದ ಸ್ಥಾಪನೆಗೆ ಸರಕಾರದಿಂದ 25 ಎಕರೆ ಭೂಮಿಯನ್ನು ಮಂಜೂರು ಮಾಡಿಸಲಾಗಿದೆ.

ಕರ್ನಾಟಕ ಸರಕಾರ ನ್ಯಾಯಮೂರ್ತಿ ಶ್ರೀ ನಾಗಮೋಹನ ದಾಸ ವರದಿ ಆಧಾರಿತ ಸರಕಾರದ ನಿರ್ಧಾರವನ್ನು ಮತ್ತೆ ಮರಳಿ ಕೇಂದ್ರ ಸರ್ಕಾರದ ಅಲ್ಪ ಸಂಖ್ಯಾತ ಇಲಾಖೆಗೆ ಸಲ್ಲಿಸಲು ಮೀನ ಮೇಷ ಮಾಡುತ್ತಿದೆ.

ಶ್ರೀಮಂತರಿಗೆ ಮಠಾಧೀಶರಿಗೆ ರಾಜಕಾರಣಿಗಳಿಗೆ ಶಿಕ್ಷಣ ಸಂಸ್ಥೆಯ ಮಾಲೀಕರಿಗೆ ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯುವುದು ಬೇಕಾಗಿಲ್ಲ. ಬಡವರಿಗೆ ಇದರ ಪೂರ್ಣ ವಿವರ ಗೊತ್ತಿಲ್ಲ. ಮಧ್ಯಮ ವರ್ಗದ ಜನರಿಗೆ ಶಕ್ತಿಯಿಲ್ಲ.

ಲಿಂಗಾಯತ ಧರ್ಮದ ಮಾನ್ಯತೆ ಹೋರಾಟಕ್ಕೆ ಬೇಕಾಗಿರುವುದು ಬದ್ಧತೆ ಸೈದ್ಧಾಂತಿಕ ಚಿಂತನೆಗಳ ಸ್ಪಷ್ಟತೆ.

ಕರ್ನಾಟಕದ ಘನ ಸರಕಾರಕ್ಕೆ ಲಿಂಗಾಯತರ ಮತಗಳು ಬೇಕು, ಆದರೆ ನ್ಯಾಯ ಸಮ್ಮತ ಕಾನೂನು ಸಮ್ಮತ ಸಂವಿಧಾನಾತ್ಮಕ ಧರ್ಮ ಮಾನ್ಯತೆ ಬೇಡಿಕೆಗೆ ಕನಿಷ್ಠ ಸ್ಪಂದಿಸುವ ವ್ಯವಧಾನ ಇಲ್ಲ.

ಇಂದು ವೀರಶೈವರು ಸಂಘ ಪರಿವಾರದ ಸದಸ್ಯರು ಹಿಂದೂ ಸಂಘಟನೆಗಳು ಒಂದು ಕಡೆಗೆ ಕೂಡಿ ಒಗ್ಗಟ್ಟಾದರೆ. ಲಿಂಗಾಯತ ಬಸವಣ್ಣ ಎನ್ನುವ ಬಸವ ಸಂಘಟನೆಗಳು ಆಂತರಿಕ ಸಂಘರ್ಷ ಕಿತ್ತಾಟದಿಂದ ವಿಘಟಯಾಗಿವೆ.

ಇಲ್ಲಿ ನಾನು ಯಾರನ್ನೂ ಹೆಸರಿಸದೆ, ದೂಷಿಸದೆ ರಾಜಕೀಯ ಪಕ್ಷದ ನಾಯಕರ ಮತ್ತು ಮಠಗಳ ಕಾವಿಗಳನ್ನು ಹೊರತು ಪಡಿಸಿ ಬಸವ ಭಕ್ತರು ನಮ್ಮ ಧರ್ಮ ತತ್ವ ಸಿದ್ಧಾಂತಗಳನ್ನು ಉಳಿಸಿ ಕೊಳ್ಳಬೇಕು.

ಲೇಖನ
ಡಾ ಶಶಿಕಾಂತ ಪಟ್ಟಣ
ರಾಮದುರ್ಗ - ಪುಣೆ



# ಅಥಣಿ-ಪುಣೆ & ಕೊಲ್ಲಾಪುರ ಬಸ್ ಸೇವೆಗೆ ಶಾಸಕ ಸವದಿ ಚಾಲನೆ



■ **ಉದಯರಶ್ಮಿ ದಿನಪತ್ರಿಕೆ**

ಅಥಣಿ: ತಾಲೂಕಿನ ಪ್ರಯಾಣಿಕರ ಅನುಕೂಲಕ್ಕಾಗಿ ಅಥಣಿಯಿಂದ ಪುಣೆ ಹಾಗೂ ಅಥಣಿಯಿಂದ ಕೊಲ್ಲಾಪುರ ಮಾರ್ಗವಾಗಿ ನೂತನ ಬಸ್ ಸೇವೆಗಳನ್ನು ಪ್ರಾರಂಭಿಸಲಾಗಿದ್ದು, ಮಾಜಿ ಉಪ ಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರು ಇಂದು ಹಸಿರು ನಿಶಾನೆ ತೋರಿಸುವ ಮೂಲಕ ಸೇವೆಗೆ ಚಾಲನೆ ನೀಡಿದರು.

ಬಸ್ ಸೇವೆಗೆ ಚಾಲನೆ ನೀಡಿ ಮಾತನಾಡಿದ ಶಾಸಕ ಲಕ್ಷ್ಮಣ ಸವದಿ ಅವರು, ಅಥಣಿ ತಾಲೂಕಿನ ಜನತೆ ಉದ್ಯೋಗ, ಶಿಕ್ಷಣ ಹಾಗೂ ವೈದ್ಯಕೀಯ ಚಿಕಿತ್ಸೆಗಾಗಿ ಪುಣೆ ಮತ್ತು ಕೊಲ್ಲಾಪುರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಸುತ್ತಾರೆ. ಸಾರ್ವಜನಿಕರ ದೀರ್ಘಕಾಲದ ಬೇಡಿಕೆಯನ್ನು ಪರಿಗಣಿಸಿ, ಪ್ರಯಾಣಿಕರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸುಗಮ ಸಾರಿಗೆ ವ್ಯವಸ್ಥೆ ಕಲ್ಪಿಸಲು ಈ ಹೊಸ ಬಸ್ ಮಾರ್ಗಗಳನ್ನು ಆರಂಭಿಸಲಾಗಿದೆ. ಈ ಸೇವೆಯು ವಿದ್ಯಾರ್ಥಿಗಳು, ಉದ್ಯೋಗಸ್ಥರು ಮತ್ತು ವ್ಯಾಪಾರಿಗಳಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಿದೆ,ಎಂದು ತಿಳಿಸಿದರು.

ಅಲ್ಲದೆ, ತಾಲೂಕಿನ ಅಭಿವೃದ್ಧಿಯ ದೃಷ್ಟಿಯಿಂದ ಸಾರಿಗೆ ಸಂಪರ್ಕ ಅತ್ಯಗತ್ಯವಾಗಿದ್ದು, ಮುಂದಿನ ದಿನಗಳಲ್ಲಿ ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ದಿನಾಲು ಅಥಣಿಯಿಂದ ಶಿರಸಿ ವರೆಗೆ ಬಸ್ ಸೇವೆ ಒದಗಿಸಲು ಹಾಗೂ ಇನ್ನೂ ಹೆಚ್ಚಿನ ಸಾರಿಗೆ ಸೌಲಭ್ಯಗಳನ್ನು ಒದಗಿಸಲು ಪ್ರಯತ್ನಿಸಲಾಗುವುದು ಎಂದು ಅವರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣ ಅಧಿಕಾರಿ ಮಹಾದೇವ ಮುಂಜಿ, ಎನ್. ಎಂ. ಕೇರಿ, ಬಿ.ಬಿ. ಜಗದಾಳ, ಸಿದ್ದಾರ್ಥ ಶಿಂಗೆ, ಶಾಮ ಪೂಜಾರಿ, ವಿನಾಯಕ ಬಾಗಡಿ, ಕಲ್ಲೇಶ ಮಡ್ಡಿ,ಅಮೀನಸಾಬ ಚಿಂಚಲಿ, ಮಹೇಂದ್ರ ಸಾಳವೆ, ಮೆಹಬೂಬ್ ರಿಸಾಲ್ದಾರ್, ಮುತ್ತು ಮೊಕಾಸಿ, ಮಲ್ಲು ಕೊಳ್ಳೋಲಿ ಸೇರಿದಂತೆ ಸಾರಿಗೆ ಇಲಾಖೆಯ ಸಿಬ್ಬಂದಿ, ಸ್ಥಳೀಯ ಮುಖಂಡರು ಮತ್ತು ಸಾರ್ವಜನಿಕರು ಉಪಸ್ಥಿತ-ರಿದ್ದರು.

# ರೈತರ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು: ಶಾಸಕ ಸವದಿ



■ **ಉದಯರಶ್ಮಿ ದಿನಪತ್ರಿಕೆ**

ಅಥಣಿ: ತಾಲೂಕಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗಳಲ್ಲಿ 85%ಕ್ಕಿಂತ ಅಧಿಕ ಅಂಕ ಪಡೆದ 2000ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಅವರ ನೇತೃತ್ವದಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು.

ಹಲ್ಯಾಳದ ರೈತ ಸಭಾ ಭವನದಲ್ಲಿ ನಡೆದ ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಲಕ್ಷ್ಮಣ ಸವದಿ ಅವರು, ಗ್ರಾಮೀಣ ಭಾಗದ ಮಕ್ಕಳು ಪ್ರತಿಭೆಯಲ್ಲಿ ಯಾರಿಗೂ ಕಡಿಮೆ ಇಲ್ಲ ಸರಿಯಾದ ಪ್ರೋತ್ಸಾಹ ಸಿಕ್ಕರೆ ಸಾಕು ನಮ್ಮ ರಾಜ್ಯ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡುತ್ತಾರೆ 85%ಕ್ಕಿಂತ ಹೆಚ್ಚು ಅಂಕ ಪಡೆದ ಈ 2000 ಮಕ್ಕಳು ನಮ್ಮ ತಾಲೂಕಿನ ಹೆಮ್ಮೆ ಇವರ ಅಂಕ ಮಾತ್ರ ಮುಖ್ಯವಲ್ಲ ಮುಂದೆ ಸಮಾಜಕ್ಕೆ ಒಳ್ಳೆಯ ಪ್ರಜೆಗಳಾಗಿ ಬೆಳೆಯಬೇಕು ನಿಮ್ಮ ಮುಂದಿನ ಶಿಕ್ಷಣಕ್ಕೆ ನನ್ನ ಸಂಪೂರ್ಣ ಬೆಂಬಲ ಇರುತ್ತದೆ ಎಂದ ಅವರು, ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಥಣಿ ಕ್ಷೇತ್ರದಲ್ಲಿ ಯಾವೊಬ್ಬ ರೈತನ ಮಗನು ಶಿಕ್ಷಣದಿಂದ ವಂಚಿತನಾಗಬಾರದು ಎಂದರು.

ಅಲ್ಪಸಂಖ್ಯಾತ ಹಾಗೂ ಹಿಂದುಳಿದ ಜನಾಂಗದವರು ಇನ್ನೂ ಹೆಚ್ಚಾಗಿ ಶಿಕ್ಷಣದತ್ತ ಗಮನ ಹರಿಸಬೇಕಿದೆ. ಈ ನಿಟ್ಟಿನಲ್ಲಿ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ನಿಮ್ಮ ಮಕ್ಕಳನ್ನು ಶಿಕ್ಷಣವಂತರನ್ನಾಗಿ ಮಾಡಿ ಎಂದು ಶಾಸಕರು ಮನವಿ ಮಾಡಿದರು.

ಪ್ರಾಸ್ತಾವಿಕವಾಗಿ ಕಾಂಗ್ರೆಸ್ ಮುಖಂಡ ಚಿದಾನಂದ ಸವದಿ ಹಾಗೂ ಎಸ್ ಬಿ ವಿಜಡಂ ಕ-ರಿಯರ್ ಅಕಾಡೆಮಿಯ ಶರಣಯ್ಯ ಭಂಡಾರಿಮಠ ಮಾತನಾಡಿದರು.

ಈ ವೇಳೆ ಶಿವಬಸವ ಮಹಾಸ್ವಾಮಿಜಿ ಗಚ್ಚಿನಮಠ ಅಥಣಿ ಹಾಗೂ ಮಹಾಂತಪ್ರಭು ಸ್ವಾಮಿಗಳು ವಿರಕ್ತಮಠ ಶೇಗುಣಸಿ ಆಶೀರ್ವಚನ ನೀಡಿ, ತಾಲೂಕಿನ ಎಲ್ಲ ಮಕ್ಕಳಿಗೂ ಶಿಕ್ಷಣದ ಬೆಳಕು ದೊರೆಯಲಿ ಎಂದರು.

ಸಮಾರಂಭದಲ್ಲಿ ಸುಮಾರು 2000 ವಿದ್ಯಾರ್ಥಿಗಳು ಭಾಗವಹಿಸಿ ಸತ್ಕಾರವನ್ನು ಸ್ವೀಕ-ರಿಸಿದರು.

ಈ ಸಂದರ್ಭದಲ್ಲಿ ಮಾಜಿ ಜಿಲ್ಲಾ ಪಂಚಾಯತ ಸದಸ್ಯರಾದ ಶ್ರೀಶೈಲ ನಾರಗೊಂಡ, ಶಿದರಾಯ ಯಲಡಗಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಮ್ ಆರ್ ಮುಂಜೆ, ಸಂತೋಷ ಹಳ್ಳೂರ, ವಿರಣ್ಣ ವಾಲಿ, ಗುತ್ತಿಗೆದಾರ ಶಿವರುದ್ರ ಗೂಳಪ್ಪನ್ನವರ, ಶಿವು ನಾಯಿಕ,ರಾಮನಗೌಡ ಪಾಟೀಲ, ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ದತ್ತಾ ವಾಸ್ಟರ್, ಸಂತೋಷ ಸಾವಡಕರ, ಸುಮಿತ ಸವದಿ, ಶಿವಕುಮಾರ ಸವದಿ,ಸಿದ್ದಾರೂಡ ಸವದಿ ಸೇರಿದಂತೆ ಇನ್ನಿತಿತರು ಉಪಸ್ಥಿತರಿದ್ದರು


# ಫೆಸಿಲಿಟೇಟರ ಹುದ್ದೆ ತಾತ್ಕಾಲಿಕ ನೇಮಕಾತಿಗೆ ಅರ್ಜಿ ಕರೆ

■ **ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ಧಾರವಾಡದ ಕೃಷಿ ವಿಶ್ವವಿದ್ಯಾಲಯದ ದೇಶಿ ಯೋಜನೆಯಡಿಯಲ್ಲಿ ಖಾಲಿ ಇರುವ ಫೆಸಿಲಿಟೇಟರ್ ಹುದ್ದೆ ತಾತ್ಕಾಲಿಕ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಒಟ್ಟು 2 ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದ್ದು, ಕೃಷಿಯಲ್ಲಿ ಪದವಿ ಅಥವಾ ಸ್ನಾತಕೋತ್ತರ ಪದವಿ ಪಡೆದ ಹಾಗೂ ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ವಿಭಾಗದ ಹುದ್ದೆಗಳ ಅನುಭವ ಹೊಂದಿರಬೇಕು. ನೇಮಕಾತಿ ಪಡೆಯಲು ಬಯಸುವ ಅಭ್ಯರ್ಥಿಗಳು ಅರ್ಜಿ ನಮೂನೆ ಎರಡು ಪ್ರತಿಗಳೊಂದಿಗೆ ದಿನಾಂಕ :5-06-2026ರಂದು ಬೆಳಿಗ್ಗೆ 10 ಗಂಟೆಗೆ ಸಹ ವಿಸ್ತರಣಾ ನಿರ್ದೇಶಕರು ಕೃಷಿ ವಿಸ್ತರಣಾ ಕೇಂದ್ರ ವಿಜಯಪುರದಲ್ಲಿ ನಡೆಯುವ ಸಂದರ್ಶನಕ್ಕೆ ಎಲ್ಲ ಮೂಲ ದಾಖಲೆಗಳನ್ನು ಹಾಗೂ ದೃಢೀಕೃತ ಎರಡು ಪ್ರತಿಗಳೊಂದಿಗೆ ಹಾಜರಾಗಬೇಕು. ಈ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ಸಹ ವಿಸ್ತರಣಾ ನಿರ್ದೇಶಕರು ಕೃಷಿ ವಿಸ್ತರಣಾ ಕೇಂದ್ರ ವಿಜಯಪುರ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

# ಶಿಕ್ಷಕರ ಸಂಘದ ಪದಾಧಿಕಾರಿಗಳ ಅವಿರೋಧ ಆಯ್ಕೆ

■ **ಉದಯರಶ್ಮಿ ದಿನಪತ್ರಿಕೆ**



ದೇವರಹಿಪ್ಪರಗಿ: ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲ್ಲೂಕು ಘಟಕದ ನೂತನ ಅಧ್ಯಕ್ಷರಾಗಿ ಪಿ.ಸಿ.ತಳಕೇರಿ ಆಯ್ಕೆಯಾಗಿದ್ದಾರೆ.

ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಡಿ ಗುರುವಾರ ಜರುಗಿದ ತಾಲ್ಲೂಕು ಪದಾಧಿಕಾ-ರಿಗಳ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಸಿದ್ರಾಮಪ್ಪ ಮುಳಸಾವಳಗಿ (ಉಪಾಧ್ಯಕ್ಷ), ರೇಣುಕಾಬಾಯಿ ಇಂಡಿ( ಮಹಿಳಾ ಉಪಾಧ್ಯಕ್ಷೆ), ಬಸವರಾಜ ನಾಗರಾಳ( ಪ್ರಧಾನ ಕಾರ್ಯದರ್ಶಿ), ದಾನು ರಾಠೋಡ(ಖಜಾಂಚಿ), ರವೀಂದ್ರ ಕೋಟಿನ್(ಸಹ ಕಾರ್ಯದರ್ಶಿ), ಪುಷ್ಪಾವತಿ ರೂಗಿ( ಮಹಿಳಾ ಸಹಕಾರ್ಯದರ್ಶಿ), ರಹಮತಲ್ಲಾ ಹಳ್ಳಿ( ಸಂಘಟನಾ ಕಾರ್ಯದರ್ಶಿ), ಫರೀದಾಭಾನು ಶೇಖ್(ಮಹಿಳಾ ಸಂಘಟನಾ ಕಾರ್ಯದರ್ಶಿ) ಆಯ್ಕೆಯಾದರು.

# ರಾಜ್ಯದ ವಿವಿಧ ಮೀನುಗಾರ ಸಂಘಟನೆಗಳು, ಸಮಾಜದ ಮುಖಂಡರು ಹಾಗೂ ಸಾರ್ವಜನಿಕ ವಲಯದ ಗಣ್ಯರಿಂದ ಸರ್ಕಾರಕ್ಕೆ ಆಗ್ರಹ

# ಮೀನುಗಾರ ಸಮುದಾಯದ ನಾಯಕ ಮಂಜುನಾಥ ಗೆ ಎಂಎಲ್ಸಿ ಸ್ಥಾನ ನೀಡಿ

■ **ಉದಯರಶ್ಮಿ ದಿನಪತ್ರಿಕೆ**



ಬೆಂಗಳೂರು: ರಾಜ್ಯದ ಮೀನುಗಾರ ಸಮುದಾಯದ ಹಕ್ಕುಗಳು, ಸಾಮಾಜಿಕ ನ್ಯಾಯ, ರಾಜಕೀಯ ಪ್ರಾತಿನಿಧ್ಯ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ನಿರಂತರ ಹೋರಾಟ ನಡೆಸುತ್ತಿರುವ ಕೆಪಿಸಿಸಿ ಮೀನುಗಾರರ ವಿಭಾಗದ ರಾಜ್ಯಾಧ್ಯಕ್ಷರು ಹಾಗೂ ರಾಷ್ಟ್ರೀಯ ಮೀನುಗಾರರ ಸಂಘದ ಕರ್ನಾಟಕ ರಾಜ್ಯಾಧ್ಯಕ್ಷ ಮಂಜುನಾಥ ಭೀ ಸುಣಗಾರ ಅವರನ್ನು ಕರ್ನಾಟಕ ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ರಾಜ್ಯದ ವಿವಿಧ ಮೀನುಗಾರ ಸಂಘಟನೆಗಳು, ಸಮಾಜದ ಮುಖಂಡರು, ಯುವ ನಾಯಕರು ಹಾಗೂ ಸಾರ್ವಜನಿಕ ವಲಯದ ಗಣ್ಯರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಮಂಜುನಾಥ ಭೀ ಸುಣಗಾರ ಅವರು ಕಳೆದ ಹಲವು ವರ್ಷಗಳಿಂದ ರಾಜ್ಯದ ಕರಾವಳಿ ಮತ್ತು ಒಳನಾಡು ಮೀನುಗಾರರ ಸಮಸ್ಯೆಗಳ ಕುರಿತು ನಿರಂತರವಾಗಿ ಧ್ವನಿ ಎತ್ತುತ್ತಾ ಬಂದಿದ್ದಾರೆ. ಮೀನುಗಾರ ಸಮುದಾಯದ ಶಿಕ್ಷಣ, ಉದ್ಯೋಗ, ವಸತಿ, ಸಾಮಾಜಿಕ ಭದ್ರತೆ ಹಾಗೂ ರಾಜಕೀಯ ಸಬಲೀಕರಣಕ್ಕಾಗಿ ಅನೇಕ ಹೋರಾಟಗಳು, ಸಭೆಗಳು ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿ ಜನಮನ ಗೆದ್ದಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮೀನುಗಾರ ಸಮುದಾಯದ ಸಭೆಗಳನ್ನು ಆಯೋಜಿಸಿ, ಸರ್ಕಾರದ ವಿವಿಧ ಯೋಜನೆಗಳು ಸಮುದಾಯಕ್ಕೆ ತಲುಪುವಂತೆ ಶ್ರಮಿಸಿರುವ ಅವರು, ಮೀನುಗಾರ ಯುವಕರಿಗೆ ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ನಿರಂತರವಾಗಿ ಕೆಲಸ ಮಾಡುತ್ತಿದ್ದಾರೆ. ವಿಶೇಷವಾಗಿ ಮೀನುಗಾರ ಮಹಿಳೆಯರ ಸ್ವಾವಲಂಬನೆಗಾಗಿ ಹಲವು ಕಾರ್ಯಕ್ರಮಗಳನ್ನು ರೂಪಿಸಿ ಪ್ರೋತ್ಸಾಹ ನೀಡಿರುವುದು ಗಮನಾರ್ಹವಾಗಿದೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಮೀನುಗಾರರ ವಿಭಾಗವನ್ನು ಸಂಘಟಿ-ತವಾಗಿ ಬಲಪಡಿಸುವಲ್ಲಿ ಮಂಜುನಾಥ ಭೀ ಸುಣಗಾರ ಅವರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ರಾಜ್ಯದ ಮೂಲೆ ಮೂಲೆಗಳಲ್ಲಿ ಕಾಂಗ್ರೆಸ್ ಪಕ್ಷದ ತತ್ವಗಳನ್ನು ಜನರಿಗೆ ತಲುಪಿಸುವ ಜೊತೆಗೆ ಮೀನುಗಾರ ಸಮುದಾಯವನ್ನು ರಾಜಕೀಯವಾಗಿ ಜಾಗೃತಗೊಳಿಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಮೀನುಗಾರ ಸಮುದಾಯದ ವಿವಿಧ ಸಮಸ್ಯೆಗಳ ಕುರಿತು ರಾಜ್ಯ ಸರ್ಕಾರದ ಗಮನ ಸೆಳೆಯಲು ಹಲವು ಹೋರಾಟಗಳನ್ನು ನಡೆಸಿ, ಮೀನುಗಾರರ ಬದುಕಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳು ದೊರಕಿಸುವ ನಿಟ್ಟಿನಲ್ಲಿ ಶ್ರಮಿಸಿದ್ದಾರೆ. ಮೀನುಗಾರರಿಗೆ ಸಾಲ ಸೌಲಭ್ಯ, ಮೀನುಗಾರಿಕಾ ಅಭಿವೃದ್ಧಿ ಯೋಜನೆಗಳು, ಮೀನುಗಾರರ ಮಕ್ಕಳಿಗೆ ವಿದ್ಯಾರ್ಥಿವೇತನ, ಮೀನುಗಾರ ಮಹಿಳೆಯರಿಗೆ ಸ್ವಸಹಾಯ ಯೋಜನೆಗಳು ಸೇರಿದಂತೆ ಅನೇಕ ಬೇಡಿಕೆಗಳನ್ನು ಸರ್ಕಾರದ ಮುಂದೆ ಮಂಡಿಸಿ ಪರಿಹಾರ ದೊರಕಿಸುವ ಕೆಲಸ ಮಾಡಿದ್ದಾರೆ. ರಾಜ್ಯದ ಹಲವಾರು ಪತ್ರಿಕೆಗಳು ಹಾಗೂ ಮಾಧ್ಯಮಗಳಲ್ಲಿ ಮಂಜುನಾಥ ಭೀ ಸುಣಗಾರ ಅವರ ಸಾಮಾಜಿಕ ಹಾಗೂ ಸಂಘಟನಾ ಕಾರ್ಯಗಳಿಗೆ ವ್ಯಾಪಕ ಪ್ರಶಂಸೆ ವ್ಯಕ್ತವಾಗಿದೆ. ಮೀನುಗಾರ ಸಮುದಾಯದ ಪರವಾಗಿ ನಡೆಸಿದ ಹೋರಾಟಗಳು, ಸಮಾಜಮುಖಿ ಸೇವೆಗಳು ಹಾಗೂ ರಾಜಕೀಯ ಚಟುವಟಿಕೆಗಳ ಕುರಿತು ಅನೇಕ ವರದಿಗಳು ಪ್ರಕಟಗೊಂಡಿವೆ. ಇದರಿಂದ ರಾಜ್ಯದಾದ್ಯಂತ ಅವರಿಗೆ ಅಪಾರ ಜನಬೆಂಬಲ ಮತ್ತು ಗೌರವ ದೊರೆತಿದೆ.

ಮೀನುಗಾರ ಸಮುದಾಯದ ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿರುವ ಮಂಜುನಾಥ ಭೀ ಸುಣಗಾರ ಅವರು ಸರಳತೆ, ಪ್ರಾಮಾಣಿಕತೆ ಹಾಗೂ ಹೋರಾಟದ ಮನೋಭಾವದಿಂದ ಜನರ ವಿಶ್ವಾಸ ಗಳಿಸಿದ್ದಾರೆ. ಸಮಾಜದ ಎಲ್ಲ ವರ್ಗಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವ ಅವರು ಬಡ, ಹಿಂದುಳಿದ ಹಾಗೂ ದುರ್ಬಲ ವರ್ಗಗಳ ಪರವಾಗಿ ಸದಾ ನಿಲ್ಲುವ ನಾಯಕನಾಗಿ ಗುರುತಿಸಿಕೊಂಡಿದ್ದಾರೆ.


ಮೀನುಗಾರ ಸಮುದಾಯಕ್ಕೆ ರಾಜಕೀಯವಾಗಿ ನ್ಯಾಯ ಒದಗಿಸುವ ನಿಟ್ಟಿನಲ್ಲಿ ವಿಧಾನ ಪರಿಷತ್ತಿನಲ್ಲಿ ಸಮುದಾಯದ ಪ್ರಬಲ ಪ್ರತಿನಿಧಿತ್ವ ಅಗತ್ಯವಿದೆ. ಆ ನಿಟ್ಟಿನಲ್ಲಿ ಮಂಜುನಾಥ ಭೀ ಸುಣಗಾರ ಅವರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡುವುದರಿಂದ ಲಕ್ಷಾಂತರ ಮೀನುಗಾರ ಕುಟುಂಬಗಳ ಆಶಯಗಳಿಗೆ ಬಲ ಸಿಗಲಿದೆ ಎಂದು ಸಂಘಟನೆಗಳ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ.

ಹೀಗಾಗಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಕಾಂಗ್ರೆಸ್ ಪಕ್ಷದ ರಾಜ್ಯ ನಾಯಕರು ಹಾಗೂ ಹೈಕಮಾಂಡ್ ಮಂಜುನಾಥ ಭೀ ಸುಣಗಾರ ಅವರಿಗೆ ವಿಧಾನ ಪರಿಷತ್ ಸದಸ್ಯ ಸ್ಥಾನ ನೀಡಿ ಮೀನುಗಾರ ಸಮುದಾಯಕ್ಕೆ ನ್ಯಾಯ ಒದಗಿಸಬೇಕು ಎಂದು ಪ್ರಕಟಣೆಯಲ್ಲಿ ಒತ್ತಾಯಿಸಲಾಗಿದೆ.

## ಬಸವ ಜಯಂತಿ ಕಾರ್ಯಕ್ರಮದಲ್ಲಿ ಜೆಡಿಎಸ್ ಮುಖಂಡ ಜಯಪ್ರಕಾಶ್ ಹೇಳಿಕೆ

# ಬಸವಣ್ಣನವರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು

■ **ಉದಯರಶ್ಮಿ ದಿನಪತ್ರಿಕೆ**



ಎಚ್ ಡಿ ಕೋಟೆ: ಇಬ್ಬರು ಮಹಾದಿಗ್ಗಜರು ಜನಿಸಿದ ತಿಂಗಳು ಏಪ್ರಿಲ್. ಬಸವಣ್ಣನವರು ಕಾಯಕ ಮತ್ತು ವಚನಗಳ ಮೂಲಕ ನಮಗೆ ಆದರ್ಶಪ್ರಾಯವಾಗಿದ್ದರೆ, ಡಾ. ಬಿ.ಆರ್ ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಸಮಾನತೆ ಸಾರಿದವರು. ನಾಡು ಕಂಡ ಇಂತ ಮಹನೀಯರ ತತ್ವ, ಆದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಂಡು ಅವರ ಮಾರ್ಗದಲ್ಲಿ ನಡೆಯಬೇಕು ಎಂದು ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ ಹೇಳಿದರು.

ಪಟ್ಟಣದ ಜೆಎಸ್ ಮಂಗಳ ಮಂಟಪದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಹೆಚ್ ಡಿ. ಕೋಟೆ ಘಟಕ ವತಿಯಿಂದ ಆಯೋಜಿಸಿದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. 12 ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಸಾರಿದ ತತ್ವ ಆದರ್ಶಗಳು ಇಂದಿಗೂ ಪ್ರಸ್ತುತವಾಗಿದ್ದು, ಇಂದಿನ ಜನಾಂಗ ಅವುಗಳನ್ನು ಅರಿತುಕೊಳ್ಳುವ ಮೂಲಕ ನಾಡಿನ ಏಳ್ಗೆಗೆ ಶ್ರಮಿಸಬೇಕು ಎಂದು ಜಯಪ್ರಕಾಶ್ ಚಿಕ್ಕಣ್ಣ ಹೇಳಿದರು.

ಕನಕಪುರ ಶ್ರೀ ದೇಗುಲ ಮಠ ಕಿರಿಯ ಚನ್ನಬಸವ ಸ್ವಾಮಿ ಮಾತನಾಡಿ, ಹೆಚ್ ಡಿ ಕೋಟೆ ಮತ್ತು ಸರಗೂರು ಭಾಗದಲ್ಲಿ ಬಸವಣ್ಣನವರ ತತ್ವ ಆದರ್ಶಗಳನ್ನು ತಿಳಿಸುವ ಕಾರ್ಯ ನಡೆಯುತ್ತಿರುವುದು ಬಹಳ ಸಂತೋಷವಾಗುತ್ತಿದೆ. ಸಮಾಜ ಸದೃಢವಾಗಿ ಬೆಳೆಯಲು ಜಾಗೃತರಾಗಲು ಇಂತಹ ಕಾರ್ಯಕ್ರಮಗಳು ಬಹಳ ಮುಖ್ಯ. ಸಮಾಜದ ಯುವಕರು ಕಾಯಕವನ್ನು ಮೈಗೂಡಿಸಿಕೊಂಡು, ವಚನಗಳನ್ನು ಅಳವಡಿಸಿಕೊಳ್ಳಬೇಕು. ಲಿಂಗ ಕಟ್ಟಿಕೊಳ್ಳುವುದರ ಜೊತೆಗೆ ನಡೆ ನುಡಿಯೂ ಬಹಳ ಮುಖ್ಯವಾಗುತ್ತದೆ. ನಮ್ಮ ಸಮಾಜ ಎಲ್ಲರನ್ನು ಪ್ರೀತಿಸುವಂತಾಗಬೇಕು. ನಿಸ್ವಾರ್ಥ ಸೇವೆಯಿಂದ ಸಮಾಜ ಸೇವೆ ಮಾಡಲು ಮುಂದಾಗಬೇಕು. ಎಲ್ಲರ ಸಹಕಾರದಿಂದ ಈ ದಿನ ಮಹಾಸಭಾ ಹೆಮ್ಮರವಾಗಿ ಬೆಳೆದಿದೆ ಎಲ್ಲರಿಗೂ ಶುಭವಾಗಲಿ ಎಂದು ಆಶೀರ್ವಚನ ನೀಡಿದರು. ಕಾರ್ಯಕ್ರಮದಲ್ಲಿ ತ್ರಿವಿಧ ದಾಸೋಹ ಶ್ರೀ ಮಲ್ಲೇಶ್ವರ ಮಠ ದೇವನೂರು ಶ್ರೀ ಮಹಾಂತಸ್ವಾಮಿಜೀ, ನಾಗೇಂದ್ರ ಸ್ವಾಮಿಜಿ, ಚಂದ್ರಶೇಖರ ಸ್ವಾಮೀಜಿ, ಮಲ್ಲಿಕಾರ್ಜುನ ಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ಶ್ರೀ ಮಹದೇವ ಸ್ವಾಮೀಜಿ, ಶ್ರೀ ಷಡಕ್ಷರಿ ಸ್ವಾಮಿಜೀ, ಶ್ರೀ ತೋಂಟದಾರ್ಯ ಸ್ವಾಮಿಜಿ. ಶ್ರೀ ಶಿವಕುಮಾರ ಸ್ವಾಮಿಜಿ , ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಎಸ್ ರುದ್ರಪ್ಪ, ಪ್ರಧಾನ ಕಾರ್ಯದರ್ಶಿ ಚಿಕ್ಕಕೆರೆಯೂರು ಶಿವಕುಮಾರ್, ಪ್ರಧಾನ ಭಾಷಣಕಾರ ಎಸ್. ಕಿರಣ್, ಜೆಡಿಎಸ್ ಮುಖಂಡ ಜಯಪ್ರಕಾಶ್ ಚಿಕ್ಕಣ್ಣ, ಕೆ.ಎಂ. ಕೃಷ್ಣನಾಯಕ, ಎಚ್.ವಿ.ಬಸವರಾಜು, ಸದಾನಂದ, ಬೂದನೂರ ಬಸವರಾಜಪ್ಪ, ಕಾವ್ಯ ಶಿವಮೂರ್ತಿ, ಎಚ್.ಸಿ.ಶಿವಣ್ಣ, ಪಿ.ನಾಗರಾಜಪ್ಪ, ಬಿ.ನಂದೀಶ್ ಕುಮಾರ್, ಎಂ.ಚಂದ್ರಶೇಖರ್, ಎಂ.ಪ್ರದೀಪ್ ಕುಮಾರ್, ಬಹದ್ದೂರ್ ಸತೀಶ್, ಎಂ.ಎನ್.ಜಗದೀಶ್, ಆರ್ ಸುರೇಶ್ ಸೇರಿದಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಘಟಕದ ನಿರ್ದೇಶಕರು, ಸಮುದಾಯದ ಮುಖಂಡರು ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು.

**ಜೂನಿಯರ್ ಕಾಲೇಜಿನಿಂದ ಜೆಎಸ್ ಎಸ್ ಮಂಗಳ ಮಂಟಪವರೆಗೆ ನಡೆದ ನಂದಿಧ್ವಜ ಮೆರವಣಿಗೆಗೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಚಾಲನೆ ನೀಡಿದರು.**

**ಶಾಸಕ ಅನಿಲ್ ಚಿಕ್ಕಮಾದು, ಎಚ್ ಎಂ.ಗಣೇಶ್ ಪ್ರಸಾದ್ ಹಾಗೂ ಜೆಡಿಎಸ್ ಮುಖಂಡ ಕೆ.ಎಂ. ಕೃಷ್ಣನಾಯಕ ನಂದಿಧ್ವಜಕ್ಕೆ ಪುಷ್ಪಾರ್ಚನೆ ಮಾಡಿದರು. ಶ್ರೀ ಬಸವೇಶ್ವರರ ಪುತ್ಥಳಿಯನ್ನು ಬೆಳ್ಳಿರಥದಲ್ಲಿ ಕೂರಿಸಿ ಮೆರವಣಿಗೆ ಮಾಡಲಾಯಿತು. ವೀರಗಾಸೆ ಕುಣಿತ, ಡೊಳ್ಳುಕುಣಿತ, ಮಂಗಳವಾದ್ಯ, ಚಂಡೆಮದ್ದಳೆ, ನಗಾರಿ, ತಮಟೆ, ಬ್ಯಾಂಡ್ ಸೆಟ್, ಗಾಡಿಗೊಂಬೆ, ಹಳ್ಳಿಕಾರ್ ಎತ್ತುಗಳು ಮೆರವಣಿಗೆಗೆ ಮೆರಗು ತಂದಿತು.**

# ನಗರದಲ್ಲಿ ಮತ್ತೊಂದು ಆಧಾರ್ ಸೇವಾ ಕೇಂದ್ರ ಆರಂಭ

■ **ಉದಯರಶ್ಮಿ ದಿನಪತ್ರಿಕೆ**

ವಿಜಯಪುರ: ನಗರ ನಿವಾಸಿ-ಕೇಂದ್ರಿತ ಆಧಾರ್ ಸೇವೆಗಳನ್ನು ಬಲಪಡಿಸುವ ನಿಟ್ಟಿನಲ್ಲಿ ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರದ ಬೆಂಗಳೂರು ಪ್ರಾದೇಶಿಕ ಕಚೇರಿ ಮತ್ತೊಂದು ಮಹತ್ವದ ಹೆಜ್ಜೆಯನ್ನಿರಿಸಿದ್ದು, ನಗರದ ಆಶ್ರಮ ರಸ್ತೆಯಲ್ಲಿರುವ ಬಿಎಲ್ ಡಿಇ 2ನೇ ಗೇಟ್ ಎದುರಿಗಿರುವ ಬಜಾಜ್ ಶೋರೂಂ ಮೇಲಿನ ಕಟ್ಟಡದಲ್ಲಿ ಹೊಸ ಆಧಾರ್ ಸೇವಾ ಸೇವಾ ಕೇಂದ್ರವನ್ನು ಕಾರ್ಯಾರಂಭಿಸಲಾಗಿದೆ ಎಂದು ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ತಡೆರಹಿತ ಆಧಾರ್ ಸೇವೆ: ವಿಜಯಪುರ ಆದ-ಾರ್ ಸೇವಾ ಕೇಂದ್ರಗಳ ಪೈಕಿ ಇದು 'ಮಾಡೆಲ್-ಬಿ' ಕೇಂದ್ರವಾಗಿದ್ದು, ನಿವಾಸಿಗಳಿಗೆ ತಡೆರಹಿತ ಆಧಾರ್ ಸಂಬಂಧಿತ ಸೇವೆ ಒದಗಿಸಲು ಎಂದು ಕಾರ್ಯಾಚರಣಾ ಕಿಟ್ ಗಳನ್ನು ಈ ಕೇಂದ್ರದಲ್ಲಿ ಅಳವಡಿಸಲಾಗಿದೆ. ಈ ಆಧಾರ್ ಸೇವಾ ಕೇಂದ್ರವು ಆಧಾರ್ ನೋಂದಣಿ, ಬಯೋಮೆಟ್ರಿಕ್ ನವೀಕರಣಗಳು, ದೋಷ ತಿದ್ದುಪಡಿ ಮತ್ತು ಕುಂದು-ಕೊರತೆ ನಿವಾರಣಾ ಸೇವೆಗಳನ್ನು ಒಂದೇ ಸೂರಿನಡಿ ಒದಗಿಸುತ್ತದೆ. ಈ ಕೇಂದ್ರವು ವಾರದ ಎಲ್ಲ ದಿನಗಳಲ್ಲಿ ಕಾರ್ಯನಿರ್ವಹಿಸುತ್ತದೆ.

ಈ ಆಧಾರ್ ಸೇವಾ ಕೇಂದ್ರವು ನೇರವಾಗಿ ಯುಐಡಿಎಐ ನಡಿ ಕಾರ್ಯನಿರ್ವಹಿಸುತ್ತದೆ. ಈ ಕೇಂದ್ರವನ್ನು ಸಂಪೂರ್ಣವಾಗಿ ಅಂತರ್ಗತ ಮತ್ತು ಜನಸ್ನೇಹಿಯಾಗಿ ವಿನ್ಯಾಸಗೊಳಿಸಲಾಗಿದೆ. ಇಲ್ಲಿ ಗಾಲಿಕುರ್ಚಿ, ಪ್ರವೇಶದ ಸೌಕರ್ಯ, ಸುಲಭವಾಗಿ ಬಳಸಬಹುದಾದ ಶೌಚಾಲಯಗಳು ಮತ್ತು ಪ್ರತ್ಯೇಕ ಕುಂದುಕೊರತೆ ನಿವಾರಣಾ ವ್ಯವಸ್ಥೆಗಳಿವೆ. ಪ್ರತಿಯೊಂದು ಆಧಾರ್ ಸೇವಾ ಕೇಂದ್ರವನ್ನು ಒಬ್ಬ ವ್ಯವಸ್ಥಾಪಕ ನಿರ್ವಹಿಸುತ್ತಾರೆ. ಇವರು ನಿವಾಸಿಗಳಿಂದ ಕುಂದುಕೊರತೆಗಳನ್ನು ಸ್ವೀಕರಿಸಿ, ಸಂಬಂಧಪಟ್ಟ ಅಧಿಕಾ-ರಿಗಳಿಗೆ ರವಾನಿಸಿ, ಸಕಾಲಕ್ಕೆ ಪರಿಹಾರ ಕಲ್ಪಿಸುತ್ತಾರೆ. ನಿವಾಸಿಗಳು ಆನ್ ಲೈನ್‌ನಲ್ಲಿ ಯುಐಡಿಎಐ ಆಧಾರ್ ಅಪಾಯಿಂಟ್‌ಮೆಂಟ್ ಪೋರ್ಟಲ್ ಗೆ ಭೇಟಿ ನೀಡುವ ಮೂಲಕ ಆಧಾರ್ ಸೇವೆಗಳಿಗಾಗಿ ಮುಂಚಿತವಾಗಿಯೇ ಅಪಾಯಿಂಟ್ ಮೆಂಟ್ ಕಾಯ್ದಿರಿಸಬಹುದಾಗಿದೆ. ಮಕ್ಕಳಿಗೆ ಉಚಿತ ಸೌಲಭ್ಯ: ಜಿಲ್ಲೆಯ 5 ರಿಂದ 17 ವರ್ಷದ ಒಟ್ಟು 68,000 ಮಕ್ಕಳ ಕಡ್ಡಾಯ ಬಯೋಮೆಟ್ರಿಕ್ ಅಪಡೇಟ್ ಸೌಲಭ್ಯವನ್ನು ಸೆಪ್ಟೆಂಬರ್ 30ರವರೆಗೆ ಉಚಿತವಾಗಿ ಅವಕಾಶ ಕಲ್ಪಿಸಲಾಗಿದೆ. ಪೋಷಕರು ತಮ್ಮ ಮಕ್ಕಳ ಆದ-ಾರ್ ಕಾರ್ಡ್ ಹಾಗೂ ಸಂಬಂಧಿಸಿದ ದಾಖಲೆಗಳೊಂದಿಗೆ ಹತ್ತಿರದ ಆಧಾರ್ ಕೇಂದ್ರಗಳಿಗೆ ಭೇಟಿ ನೀಡಿ ನವೀಕ-ರಿಸಿಕೊಳ್ಳಬಹುದಾಗಿದೆಇದರಿಂದಾಗಿ ಮಕ್ಕಳ ಶಾಲೆಯ ದಾಖಲಾತಿ, ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳು, ಸರ್ಕಾರದ ವಿವಿಧ ಯೋಜನೆಗಳು, ವಿದ್ಯಾರ್ಥಿ ವೇತನ, ತರಬೇತಿಗಳು ಸೇರಿದಂತೆ ಇತ್ಯಾದಿ ಯೋಜನೆಗಳ ಲಾಭ ಪಡೆಯಲು ಅನುಕೂಲವಾಗಲಿದೆ. ಜಿಲ್ಲೆಯ ಎಲ್ಲಾ ಪೋಷಕರು 5 ರಿಂದ 17 ವಯೋಮಿತಿಯ ಮಕ್ಕಳ ಆಧಾರ್ ಸಂಖ್ಯೆಗೆ ಕಡ್ಡಾಯ ಬಯೋಮೆಟ್ರಿಕ್ ಅಪ್ಲೋಡ್ ಪ್ರಕ್ರಿಯೆಯನ್ನು ಜವಾಬ್ದಾರಿಯಿಂದ ನಿರ್ವಹಿಸಿ ತಮ್ಮ ಮಕ್ಕಳಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಕೇಂದ್ರದ ಲಾಭ ಪಡೆದುಕೊಳ್ಳಬಹುದಾಗಿದೆ ಜಿಲ್ಲಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

# ಶಿಕ್ಷಕರ ಸಂಘಕ್ಕೆ ಪದಾಧಿಕಾರಿಗಳ ಅವಿರೋಧ ಆಯ್ಕೆ

■ **ಉದಯರಶ್ಮಿ ದಿನಪತ್ರಿಕೆ**

ಸಿಂದಗಿ: ತಾಲೂಕಿನ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ರಿ, ಬೆಂಗಳೂರು, ಸಿಂದಗಿ ತಾಲೂಕು ಘಟಕಕ್ಕೆ ನೂತನ ಪದಾಧಿಕಾರಿಗಳು ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ತಾಲೂಕಾಧ್ಯಕ್ಷರಾಗಿ ಗುತ್ತರಗಿ ಎಲ್‌ಟಿ ಶಾಲೆಯ ಲಕ್ಷ್ಮಣ ಸೊನ್ನ, ಉಪಾಧ್ಯಕ್ಷರಾಗಿ ಕೆಜಿಎಂಪಿಎಸ್ ಶಾಲೆಯ ಶರಣಬಸಪ್ಪ ಲಂಗೋಟಿ, ಮಹಿಳಾ ಉಪಾಧ್ಯಕ್ಷೆಯಾಗಿ ಸಿಂದಗಿಯ ಯುಬಿ-







ಎಲ್‌ಪಿಎಸ್ ಶಾಲೆಯ ಎಫ್.ಎ.ಪಠಾಣ, ಪ್ರಧಾನ ಕಾರ್ಯದರ್ಶಿಯಾಗಿ ಸಿಂದಗಿ ಜಿಎಲ್‌ಪಿಎಸ್ ಶಾಲೆಯ ಜಗದೇವಪ್ಪ ಸಿಂಗೆ, ಖಜಾಂಚಿಯಾಗಿ ರಾಂಪೂರ ಪಿಎ ಎಲ್‌ಟಿ ಜಿಎಸ್‌ಪಿಎಸ್ ಶಾಲೆಯ ರಮೇಶ ಅಡಕಿ, ಸಹ ಕಾರ್ಯದರ್ಶಿಯಾಗಿ ಬಂದಾಳ ಗ್ರಾಮದ ಯುಬಿಎಲ್‌ಪಿಎಸ್ ಶಾಲೆಯ ಡಿ.ಎಚ್.ಚೌಧರಿ, ಮಹಿಳಾ ಸಹ ಕಾರ್ಯದರ್ಶಿಯಾಗಿ ಯರಗಲ್ ಬಿಕೆ ಎಚ್.ಪಿ.ಎಸ್ ಶಾಲೆಯ ಭಾಗ್ಯಶ್ರೀ ತಡಲಗಿ, ಸಂಘಟನಾ ಕಾರ್ಯದರ್ಶಿಯಾಗಿ ಬಬಲೇಶ್ವರ ಗ್ರಾಮದ ಜಿಎಚ್‌ಪಿ-ಎಸ್ ಶಾಲೆಯ ಡಿ.ಸಿ.ಜಾಧವ, ಮಹಿಳಾ ಸಂಘಟನಾ ಕಾರ್ಯದರ್ಶಿಯಾಗಿ ಎಮ್‌ಪಿಎಸ್ ಶಾಲೆಯ ಸುಮಂಗಲಾ ಕೆಂಭಾವಿ ಅವರು ಅವಿರೋಧವಾಗಿ

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR